ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/–
ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAPU PRAPANCHA

ಸಂಪುಟ–05 • ಸಂಚಿಕೆ–02• ಜುಲೈ 2023



ಭಾರತ ಸಂವಿಧಾನ

ಪ್ರಸ್ತಾವನೆ

ಭಾರತದ ಜನತೆಯಾದ ನಾವು ಭಾರತವನ್ನು
ಸಾರ್ವಭೌಮ ಸಮಾಜವಾದಿ
ಮತಧರ್ಮ ನಿರಪೇಕ್ಷ ಜನತಂತ್ರಾತ್ಮಕ
ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ
ಭಾರತದ ಎಲ್ಲ ನಾಗರಿಕರಿಗೆ
ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯ
ಸ್ಥಾನಮಾನ, ಅವಕಾಶಗಳ ಸಮತೆ
ದೊರೆಯುವಂತೆ ಮಾಡುವ,
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ
ಎಲ್ಲರಲ್ಲಿ ಭ್ರಾತೃತ್ವ ಭಾವನೆ ಮೂಡಿಸುವ
ದೃಢ ಸಂಕಲ್ಪ ಮಾಡಿ
ನಮ್ಮ ಸಂವಿಧಾನ ಸಭೆಯಲ್ಲಿ
1949ರ ನವೆಂಬರ್ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ
ಅರ್ಪಿಸಿಕೊಂಡು ಅಂಗೀಕರಿಸಿ, ಶಾಸನವಾಗಿ
ವಿಧಿಸಿಕೊಂಡಿದ್ದೇವೆ

ಕರ್ನಾಟಕ ಗಾಂಧಿ
ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations,** Bangalore

ರೂ. 28/– **BAPU PRAPANCHA**

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–05 • ಸಂಚಿಕೆ–02 • ಜುಲೈ 2023

ಹಿಂದಿನ ರಕ್ಷಾಪುಟ : ಎಂ ಎಸ್ ಮೂರ್ತಿ

ಪತ್ರಗಳು

ಲೀಲಾ ವಾಸುದೇವ್ ಅವರ 'ಕರ್ನಾಟಕದ ಕಸ್ತೂರ್ ಬಾ ಯಶೋದರಮ್ಮ' ಲೇಖನ ಮಾಹಿತಿ ಪೂರ್ಣವಾಗಿದೆ. ಹೆಣ್ಣು ಮಕ್ಕಳು ಸಾಮಾಜಿಕ ಜೀವನದಲ್ಲಿ ತೊಡಗಿಸಿಕೊಳ್ಳಲೇ ಹಿಂಜರಿಯುತ್ತಿದ್ದ ಕಾಲದಲ್ಲಿಯೇ ಅವರ ಜೀವನ ಸಾಧನೆ ಮೆಚ್ಚುವಂಥಹುದು. ಮದ್ಯಪಾನ ನಿಷೇದಿಸುವ ಕಾನೂನು ಜಾರಿಗೆ ಸರ್ಕಾರ ಒಪ್ಪದಿದ್ದಾಗ ತಮ್ಮ ಸಚಿವ ಪದವಿಗೆ ಯಶೋದರಮ್ಮನವರು ರಾಜೀನಾಮೆ ನೀಡಿದ ಪ್ರಕರಣ ಶುದ್ಧ ರಾಜಕೀಯಕ್ಕೆ ಇಂದಿಗೂ ಮಾದರಿಯಾಗಿದೆ.

ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಗಾಂಧೀಜಿ ಪ್ರಭಾವಕ್ಕೆ ಒಳಗಾಗಿ ತಮ್ಮ ಕುಟುಂಬದ ಇಡೀ ಬದುಕನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಮರ್ಪಿಸಿ ಕೊಂಡ ಯಶೋದರಮ್ಮ ಅವರ ಸಾಧನೆಗೆ ಎಣೆಯೇ ಇಲ್ಲ. ಅರಸಿಕೆರೆಯ ಕಸ್ತೂರ್ ಬಾ ಆಶ್ರಮವನ್ನು ಸ್ಥಾಪಿಸಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಜೀವನ ಪೂರ್ತಿ ದುಡಿದು ಅಲ್ಲಿಯೇ ಸಮಾಧಿಯಾದ ಅವರ ಬದುಕು ಒಂದು ಧೀರೋದ್ದಾತ ಕಥನ.

ಮಹಾತ್ಮ ಗಾಂಧೀಜಿಯವರಿಂದ ನೇರ ದೀಕ್ಷೆ ಪಡೆದು ಕರ್ನಾಟಕದ ಕಸ್ತೂರ್ ಬಾ ಎಂದು ಹೆಸರು ಗಳಿಸಿದ ಯಶೋದರಮ್ಮ ಕರ್ನಾಟಕದ ಹಿರಿಮೆಯನ್ನು ರಾಷ್ಟ್ರ ಮಟ್ಟದಲ್ಲಿ ಎತ್ತಿ ಹಿಡಿದ ಧೀರ ಮಹಿಳೆ . ಮುಂದಿನ ಪೀಳಿಗೆ ಅವರ ಸೇವೆಯ ಮಾದರಿಯನ್ನು ಅನುಸರಿಸಲಿ ಎನ್ನುವುದು ನಮ್ಮ ಆಶಯವಾಗಿದೆ .

ಸಚಿನ್ ಮತ್ತು ಸಮರ್ಪಣಾ ತಂಡ

* * *

'ಸ್ಕ್ಯಾನಿಂಗ್ ಈಸ್ ನ್ಯೂ ಸ್ಪಿನ್ನಿಂಗ್' ಮಾಹಿತಿ ಲೋಕದ ಈ ಹೊಸ ನುಡಿಗಟ್ಟು ಅರ್ಥಪೂರ್ಣವಾಗಿದೆ. ಅಮೆರಿಕಾದ ಕಾರ್ಲ್ ಮಲ್ಮಡ್ ಹಿಂದ್ ಸ್ವರಾಜ್ ಹೆಸರಿನಲ್ಲಿ ಗಾಂಧೀಜಿ ಕೃತಿ ಸರಣಿ ಮತ್ತು ಭಾರತ ಸ್ವಾತಂತ್ರ್ಯ ಹೋರಾಟದ ಹಲವು ಕೃತಿಗಳನ್ನು ಸ್ಕ್ಯಾನ್ ಮಾಡಿ ಮುಕ್ತ ಜಾಲತಾಣದಲ್ಲಿ ಹಂಚುತ್ತಿರುವುದು ಮಹತ್ವದ ಸಂಗತಿ .


ಗಾಂಧೀಜಿ ವಿದೇಶಿ ಜನಪರ ಚಿಂತಕರನ್ನು ಹೀಗೆ ಸೆಳೆಯುತ್ತಿರುವುದು ಕುತೂಹಲಕಾರಿಯಾಗಿದೆ. ಭಾರತದಲ್ಲಿ ಕಾರ್ಲ್ ಮಲ್ಮಡ್ ಜೊತೆ ಈ ಮಹತ್ ಕಾರ್ಯದಲ್ಲಿ ಕೈ ಜೋಡಿಸಿರುವ ಓಂ ಶಿವಪ್ರಕಾಶ್ ಅವರಿಗೆ ಅಭಿನಂದನೆಗಳು .

ಅಭಯ, ಡಿಜಿಟಲ್ ಮಾಧ್ಯಮ ಪರಿಣಿತರು

* * *

ದೇಸಿ ಆರ್ಥಿಕ ತಜ್ಞ ಜೆ ಸಿ ಕುಮಾರಪ್ಪ ಅವರಂತವರು ನಮ್ಮ ದೇಶಕ್ಕೆ ಈಗ ಹಿಂದಿಗಿಂತ ಹೆಚ್ಚು ಅವಶ್ಯಕರಾಗಿದ್ದಾರೆ . ಭಾರತದ ಗ್ರಾಮೀಣ ಜೀವನವನ್ನು ಪೂರ್ಣವಾಗಿ ಅಧ್ಯಯನ ಮಾಡಿದ್ದ ಮಹಾತ್ಮ ಗಾಂಧಿಯವರು ಜಿ ಸಿ ಕುಮಾರಪ್ಪ ಅಂಥವರಿಗೆ ಹೆಚ್ಚು ಪ್ರೋತ್ಸಾಹ ನೀಡಿ ಗ್ರಾಮೀಣ ಅಭಿವೃದ್ಧಿಗೆ ಉತ್ತೇಜನ ನೀಡುವ ಕನಸು ಕಂಡಿದ್ದರು . ಪಾಶ್ಚಾತ್ಯ ಆರ್ಥಿಕ ಚಿಂತನೆ ನಮ್ಮ ದೇಶಕ್ಕೆ ಒಗ್ಗುವುದಿಲ್ಲ. ದೇಸಿ ಚಿಂತನೆಗಳೇ ನಮಗೆ ಬೇಕು .

ಹೇಮಲತಾ, ಶಿವಮೊಗ್ಗ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.


ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು
gandhi.sanchaya.net
ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಗೆ ಚಂದಾದಾರರಾಗಲು ಆಸಕ್ತಿ ಇರುವವರು ವಾರ್ಷಿಕ 250 ರೂಗಳನ್ನು ಪಾವತಿಸಿ ವಿಳಾಸ ಕಳುಹಿಸಿದರೆ ಅವರಿಗೆ ಅಂಚೆ ಮೂಲಕ ಪತ್ರಿಕೆಯನ್ನು ಕಳುಹಿಸಲಾಗುವುದು.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

2535125000778@cnrb

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.



ದೇವದೂತ ಮಹಾತ್ಮ ಗಾಂಧಿ...

–ಎನ್ ಆರ್ ವಿಶುಕುಮಾರ್

ಜೂನ್ 7, 1893. ದಕ್ಷಿಣ ಆಫ್ರಿಕಾ ದೇಶ. ಇಂಡಿಯಾದ ಅನಾಮಧೇಯ ವಕೀಲ ಮೋಹನದಾಸ ಕರಮಚಂದ ಗಾಂಧಿ ಡರ್ಬಾನ್ ನಗರದಿಂದ ದಕ್ಷಿಣ ಆಫ್ರಿಕಾದ ರಾಜಧಾನಿ ಪ್ರಿಟೋರಿಯಾಕ್ಕೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಆ ರೈಲು ರಾತ್ರಿ 9 ಘಂಟೆಗೆ ನಟಾಲ್ ಪ್ರಾಂತ್ಯದ ಮ್ಯಾರಿಟ್ ಬರ್ಗ್ ನಿಲ್ದಾಣ ತಲುಪಿತು.

ಇಲ್ಲಿ ರಾತ್ರಿ ಪ್ರಯಾಣಿಕರಿಗೆ ಮಲಗಲು ಬಾಡಿಗೆಗೆ ನೀಡುತ್ತಿದ್ದರು.

ಈ ರೀತಿ ಹಾಸಿಗೆ ನೀಡುವ ಸಿಬ್ಬಂದಿ ಗಾಂಧಿಯವರಿಗೆ 'ಹಾಸಿಗೆ ಬೇಕೇ' ಎಂದು ಕೇಳುತ್ತಾರೆ.

ಆದರೆ ಗಾಂಧಿ, 'ನನ್ನ ಬಳಿಯೇ ಹಾಸಿಗೆ ಇದೆ. ಬೇಡ' ಎನ್ನುತ್ತಾರೆ.

ಆ ನಂತರ ಅದೇ ಬೋಗಿಗೆ ಹತ್ತಿದ ಇನ್ನೊಬ್ಬ ಪ್ರಯಾಣಿಕ ಗಾಂಧಿಯವರನ್ನು ಮೇಲಿನಿಂದ ಕೆಳಗಿನವರೆಗೂ ನೋಡುತ್ತಾರೆ. ಗಾಂಧಿ, ಬಣ್ಣದ ಮನುಷ್ಯ ಎನ್ನುವುದು ಅವನಿಗೆ ಮೇಲ್ನೋಟಕ್ಕೇ ತಿಳಿಯುತ್ತದೆ. ಕಂದು ಬಣ್ಣದ ಮನುಷ್ಯನೊಬ್ಬ ತನ್ನ ಜೊತೆ ಪ್ರಥಮ ದರ್ಜೆ ಬೋಗಿಯಲ್ಲಿ ಪ್ರಯಾಣಿಸುವುದನ್ನು ಊಹಿಸಿಕೊಳ್ಳಲೂ ಸಹ ಅವನಿಗೆ ಆಗುವುದಿಲ್ಲ. ಸಿಡಿಮಿಡಿಗೊಂಡ ಆತ ಬಿರ ಬಿರನೇ ಹೋಗಿ ತನ್ನ ಜೊತೆ ಇಬ್ಬರು ರೈಲ್ವೆ ಅಧಿಕಾರಿಗಳನ್ನು ಕರೆದುಕೊಂಡು ಬರುತ್ತಾನೆ. ಆದರೆ ಅವರಿಬ್ಬರೂ ಏನೂ ಮಾತಾಡುವುದಿಲ್ಲ

ಇದಾದ ನಂತರ ಅಲ್ಲಿಗೆ ಇನ್ನೊಬ್ಬ ರೈಲ್ವೆ ಅಧಿಕಾರಿ ಬರುತ್ತಾನೆ. ಬಂದವನೇ ಗಾಂಧಿ ಬಳಿ ನಿಂತು 'ನೀನು ಈ ಬೋಗಿಯಿಂದ ಇಳಿದು ರೈಲಿನ ಕೊನೆಯಲ್ಲಿರುವ ವ್ಯಾನ್ ಬೋಗಿಗೆ ಹೋಗಬೇಕು' ಎನ್ನುತ್ತಾನೆ.

ಗಾಂಧಿ 'ನಾನು ಈ ಬೋಗಿಯಲ್ಲೇ ಪ್ರಯಾಣಿಸಲು ಪ್ರಥಮ ದರ್ಜೆ ಟಿಕೇಟು ತೆಗೆದುಕೊಂಡಿದ್ದೇನೆ' ಎನ್ನುತ್ತಾರೆ.

ಆತ 'ಆಯಿತು ತೆಗೆದುಕೊಂಡಿರಬಹುದು. ಆದರೆ ಸುಮ್ಮನೆ ನಾನು ಹೇಳಿದಂತೆ ನೀನು ಕೊನೆಯ ವ್ಯಾನ್ ಬೋಗಿಗೆ ಹೋಗು' ಎಂದು ಏರಿದ ದನಿಯಲ್ಲಿ ಹೇಳುತ್ತಾನೆ.



ಪೀಟರ್ ಮ್ಯಾರಿಟ್ ಬರ್ಗ್ ರೈಲು ನಿಲ್ದಾಣ ..



ಪೀಟರ್ ಮ್ಯಾರಿಟ್ ಬರ್ಗ್
ರೈಲು ನಿಲ್ದಾಣದಲ್ಲಿನ ರೈಲು

ಗಾಂಧಿ, ' ಈ ಬೋಗಿಯಲ್ಲಿ ಕುಳಿತು ಪ್ರಯಾಣ ಮಾಡಲು ನನಗೆ ಡರ್ಬಾನ್ ನಲ್ಲಿ ಅವಕಾಶ ದೊರೆತಿದೆ. ನಾನು ಈ ಬೋಗಿಯಲ್ಲಿಯೇ ಪ್ರಯಾಣಿಸುತ್ತೇನೆ' ಎಂದು ಪ್ರತಿ ಉತ್ತರ ನೀಡುತ್ತಾರೆ.

ಅಧಿಕಾರಿ ಸಿಟ್ಟಿನಿಂದ 'ಆಗುವುದಿಲ್ಲ. ನೀನು ಈ ಬೋಗಿಯಿಂದ ಕೆಳಗಿಳಿಯಲೇ ಬೇಕು. ಇಳಿಯದಿದ್ದರೆ ಪೊಲೀಸ್ ಕಾನ್ ಸ್ಟೇಬಲ್ ನನ್ನು ಕರೆಯುತ್ತೇನೆ. ನಾನೇ ಕತ್ತು ಹಿಡಿದು ನಿನ್ನನ್ನು ಆಚೆಗೆ ದಬ್ಬುತ್ತೇನೆ' ಎನ್ನುತ್ತಾನೆ.

ಗಾಂಧಿ ಇದಕ್ಕೆ ಮಣಿಯುವುದಿಲ್ಲ.
'ಆಯಿತು ನೀನು ನನ್ನನ್ನು ದಬ್ಬಬಹುದು. ಆದರೆ ನಾನಾಗಿಯೇ ರೈಲಿನಿಂದ ಕೆಳಗಿಳಿಯುವುದಿಲ್ಲ' ಎಂದು ಪ್ರತಿ ಉತ್ತರ ನೀಡುತ್ತಾರೆ.

ಈ ವೇಳೆಗೆ ಅಲ್ಲಿಗೆ ಕಾನ್ ಸ್ಟೇಬಲ್ ಬರುತ್ತಾನೆ. ಬಂದವನೇ ಗಾಂಧಿಯವರ ಕೈ ಹಿಡಿದು ಎಳೆದು ಅವರನ್ನು ರೈಲಿನಿಂದ ಆಚೆಗೆ ತಳ್ಳುತ್ತಾನೆ. ಹಿಂದೆಯೇ ಅವರ ಹಾಸಿಗೆ ಲಗೇಜುಗಳನ್ನು ಕೂಡಾ ಹೊರಕ್ಕೆ ಎಸೆಯುತ್ತಾನೆ.

ಈಗಲೂ ನೀನು ವ್ಯಾನ್ ಬೋಗಿಗೆ ಹೋಗಬಹುದು ಎಂದು ಅಧಿಕಾರಿ ಹೇಳುತ್ತಾನೆ.

ಗಾಂಧಿ ಬೇರೆ ಬೋಗಿಗೆ ಹೋಗಲು ನಿರಾಕರಿಸುತ್ತಾರೆ.

ಆ ರೈಲು ನಿಲ್ದಾಣ ಬಿಟ್ಟು ಹೋಗುತ್ತದೆ. ಅವಮಾನದಿಂದ ನೊಂದ ಗಾಂಧಿ ಬೇರೆ ದಾರಿ ಕಾಣದೆ ರೈಲು ನಿರೀಕ್ಷಣಾ ಕೊಠಡಿಗೆ ಹೋಗಿ ಕುಳಿತು ಕೊಳ್ಳುತ್ತಾರೆ. ಅವರ ಬಳಿ ಕೈ ಚೀಲ ಮಾತ್ರ ಉಳಿದಿರುತ್ತದೆ. ಅವರ ಹಾಸಿಗೆ, ಲಗೇಜು ಪ್ಲಾಟ್ ಫಾರಂ ಮೇಲೆ ಬಿದ್ದಿರುತ್ತವೆ. ನಂತರ ರೈಲ್ವೆ ಅಧಿಕಾರಿಗಳು ಅವುಗಳನ್ನು ಎತ್ತಿಕೊಂಡು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಳ್ಳುತ್ತಾರೆ.

ಆ ನಡುರಾತ್ರಿ, ಮೈಕೊರೆಯುವ ಚಳಿಯಲ್ಲಿ ಒಬ್ಬಂಟಿಯಾಗಿ ನಡುಗುತ್ತಾ ರೈಲು ನಿಲ್ದಾಣದಲ್ಲಿ ಕುಳಿತಿದ್ದ ಗಾಂಧಿ ತಮ್ಮ ಮನಸ್ಸಿನಲ್ಲಿ ಆದ ತುಮುಲಗಳನ್ನು ತಮ್ಮ ಆತ್ಮ ಕಥೆ 'my experiments with truth' ನಲ್ಲಿ ಹೀಗೆ ನಿರೂಪಿಸಿದ್ದಾರೆ.


“ ಆಗ ಚಳಿಗಾಲ. ದಕ್ಷಿಣ ಆಫ್ರಿಕಾದ ಎತ್ತರದ ಪ್ರಾಂತ್ಯಗಳಲ್ಲಿ ವಿಪರೀತ ಚಳಿ ಇರುತ್ತಿತ್ತು. ಮ್ಯಾರಿಟ್ ಬರ್ಗ್ ಕೂಡಾ ಎತ್ತರದ ಪ್ರದೇಶವಾಗಿದ್ದರಿಂದ ಅಲ್ಲಿ ಮೈ ಕೊರೆಯುವ ಚಳಿ ಇತ್ತು. ನನ್ನ ನಿಲುವಂಗಿ ನನ್ನ ಲಗೇಜ್ ಮತ್ತು ಹಾಸಿಗೆಯ ಜೊತೆಯಲ್ಲಿತ್ತು. ಅದನ್ನು ಕೇಳಲು ಹೋದರೆ ಅವರು ಮತ್ತೆ ಎಲ್ಲಿ ನನ್ನನ್ನು ಅವಮಾನಿಸುತ್ತಾರೋ ಎಂದು ಹೆದರಿ ನಾನು ಚಳಿಯಲ್ಲೇ ನಡುಗುತ್ತಾ ಮುದುರಿಕೊಂಡು ಕುಳಿತಿದ್ದೆ.

ನಿರೀಕ್ಷಣಾ ಕೊಠಡಿಯಲ್ಲಿ ಲೈಟ್ ಕೂಡಾ ಇರಲಿಲ್ಲ.

ಮಧ್ಯರಾತ್ರಿಯ ವೇಳೆಗೆ ಇನ್ನೊಬ್ಬ ಪ್ರಯಾಣಿಕ ಬಂದ. ನನ್ನ ಜೊತೆ ಮಾತಾಡಲು ಅವನಿಗೆ ಇಚ್ಛೆ ಇರುವಂತೆ ಕಾಣುತ್ತಿತ್ತು. ಆದರೆ ಮಾತಾಡಲು ನನಗೇ ಮನಸ್ಸಿರಲಿಲ್ಲ.

ನನ್ನ ಮುಂದಿನ ಕರ್ತವ್ಯದ ಬಗ್ಗೆ ಯೋಚಿಸಲಾರಂಭಿಸಿದೆ. ಇಲ್ಲೇ ನಿಂತು ನನ್ನ ಹಕ್ಕುಗಳಿಗಾಗಿ ಹೋರಾಟ ನಡೆಸಲೇ ? ಅಥವಾ ಸುಮ್ಮನೆ ಹಿಂದಿರುಗಿ ಇಂಡಿಯಾಕ್ಕೆ ಹೋಗಿ ಬಿಡಲೇ ? ಅಥವಾ ಈಗ ನನಗೆ ಆಗಿರುವ ಅವಮಾನವನ್ನು ನುಂಗಿಕೊಂಡು ಪ್ರಿಟೋರಿಯಾಕ್ಕೆ ಹೋಗಿ ನನ್ನ ಮೊಕದ್ದಮೆ ಮುಗಿಸಿ ನಂತರ ಇಂಡಿಯಾಕ್ಕೆ ಹೋಗಲೇ ? ನನ್ನ ಹೊಣೆಗಾರಿಕೆಯನ್ನು ನಿರ್ವಹಿಸದೆ ಇಂಡಿಯಾಕ್ಕೆ ಓಡಿ ಹೋಗುವುದು ಹೇಡಿತನ. ಈಗ ನನಗೆ ಒದಗಿ ಬಂದಿರುವ ಕಷ್ಟಗಳು; ಇಲ್ಲಿ ಆಳವಾಗಿ ಬೇರೂರಿರುವ ವರ್ಣದ್ವೇಷದ ಭೀಕರ ಖಾಯಿಲೆಯ ಹೊರಲಕ್ಷಣಗಳು. ಸಾಧ್ಯವಾದರೆ, ಈ ರೋಗವನ್ನು ಬುಡಸಮೇತ ಕಿತ್ತುಹಾಕಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಎದುರಾಗುವ ಎಲ್ಲ ಕಷ್ಟಗಳನ್ನು ನಾನು ಅನುಭವಿಸಬೇಕು. ಈಗಿನ ತಪ್ಪುಗಳನ್ನು ಸರಿಪಡಿಸಲು ಮತ್ತು ವರ್ಣದ್ವೇಷದ ಪೂರ್ವಾಗ್ರಹವನ್ನು ನಿವಾರಿಸಲು ಅಗತ್ಯವಿರುವಷ್ಟು ಪ್ರಯತ್ನಗಳನ್ನು ನಡೆಸಿ ಪರಿಹಾರ ಪಡೆಯಬೇಕು. ಹೀಗೆಂದು ನಿರ್ಧರಿಸಿ, ಪ್ರಿಟೋರಿಯಾಕ್ಕೆ ಹೋಗುವ ಮುಂದಿನ ರೈಲು ಹತ್ತುವ ನಿರ್ಧಾರವನ್ನು ನಾನು ಕೈಗೊಂಡೆ.

ಈ ಘಟನೆ ನಡೆದ 130 ವರ್ಷಗಳ ನಂತರ 2023 ರ ಜೂನ್ 7 ರಂದು ಬೆಳಿಗ್ಗೆ ಭಾರತೀಯ ನಿಯೋಗದ



ಮೋಹನದಾಸ ಕರಮ್ ಚಂದ್ ಗಾಂಧಿಯನ್ನು ಪೀಟರ್ ಮ್ಯಾರಿಟ್‌ಬರ್ಗ್ ನಿಲ್ದಾಣದಲ್ಲಿ ರೈಲಿನಿಂದ ಆಚೆಗೆ ದೂಡಿದ ಜಾಗದಲ್ಲಿ ಇರುವ ನಾಮಫಲಕ .



ಅಮೇರಿಕಾದ ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯದ ಇತಿಹಾಸ ತಜ್ಞ ಹಾಗೂ ಗಾಂಧೀಜಿ ವಿಚಾರವಾದಿ ಪ್ರೊಫೆಸರ್ ಕಾರ್ಲ್ ಸನ್ ಅವರಿಗೆ ತ್ರಿವರ್ಣ ಖಾದಿಹಾರ ಅರ್ಪಣೆ



ಪೀಟರ್ ಮ್ಯಾರಿಟ್ ಬರ್ಗ್ ರೈಲು ನಿಲ್ದಾಣದ ಗಾಂಧಿ ಪ್ರತಿಮೆಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಖಾದಿಹಾರ ಅರ್ಪಣೆ ..



ಕಪ್ಪು ಜನರ ಹೋರಾಟಗಳ ಇತಿಹಾಸ ತಜ್ಞ ಪ್ರೊ .ರೆವೆರೆಂಡ್ ಅಲನ್ ಬೊಸಾಕ್ ..

ನಾವುಗಳು ದಕ್ಷಿಣ ಆಫ್ರಿಕಾದ ಮ್ಯಾರಿಟ್ ಬರ್ಗ್ ರೈಲ್ವೆ ನಿಲ್ದಾಣದಲ್ಲಿದ್ದೆವು. ಈ ಅಪೂರ್ವ ಘಟನೆಯನ್ನು ಸ್ಮರಿಸಿಕೊಳ್ಳಲು ದಕ್ಷಿಣ ಆಫ್ರಿಕಾದಲ್ಲಿನ ಭಾರತ ರಾಯಭಾರ ಕಚೇರಿ ಮತ್ತು ಪೀಟರ್ ಮ್ಯಾರಿಟ್ ಬರ್ಗ್ ಗಾಂಧಿ ಫೌಂಡೇಶನ್ ಜೊತೆಗೂಡಿ ಒಂದು ವಿಶೇಷ ಕಾರ್ಯಕ್ರಮವನ್ನು ರೂಪಿಸಿತ್ತು.

ಈ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ನಾವು ಆರು ಮಂದಿಯ ನಿಯೋಗ ಭಾಗವಹಿಸಿದ್ದೆವು. ಪೀಟರ್ ಮ್ಯಾರಿಟ್ ಬರ್ಗ್ ರೈಲು ನಿಲ್ದಾಣದ ಆವರಣದಲ್ಲಿದ್ದ ಗಾಂಧಿ ಪ್ರತಿಮೆಗೆ ಖಾದಿ ಹಾರವನ್ನು ಹಾಕಿ ನಮ್ಮ ಗೌರವವನ್ನು ಸಮರ್ಪಿಸಿದೆವು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು, ಹಾಗೂ ಇತರೆ ಆಸಕ್ತರಿಗೂ ಕೂಡಾ ಖಾದಿಹಾರವನ್ನು ಹಾಕಿ ಸಡಗರ ಪಟ್ಟೆವು. ಖುಷಿಯ ಸಂಗತಿಯೆಂದರೆ; ಖಾದಿಹಾರ ಹಾಕಿಸಿಕೊಂಡ ಹಲವರು ಕಾರ್ಯಕ್ರಮ ಮುಗಿಯುವವರೆಗೂ ಈ ಖಾದಿಹಾರ ಧರಿಸಿಯೇ ಓಡಾಡುತ್ತಿದ್ದರು.

ವಿಶೇಷ ಕಾರ್ಯಕ್ರಮದ ಅಂಗವಾಗಿ ಅಂದು ಬೆಳಿಗ್ಗೆ ಡರ್ಬಾನ್ ನಗರದಿಂದ ಒಂದು ವಿಶೇಷ ರೈಲು ಹೊರಟು ಬೆಳಿಗ್ಗೆ ಹತ್ತು ಘಂಟೆಗೆ ಮ್ಯಾರಿಟ್ ಬರ್ಗ್ ನಿಲ್ದಾಣಕ್ಕೆ ಸಿಳ್ಳೆ ಹಾಕುತ್ತಾ ಆಗಮಿಸಿತು. ರೈಲು ನಿಲ್ದಾಣಕ್ಕೆ ಆಗಮಿಸಿದ ಸಮಯಕ್ಕೆ ಸರಿಯಾಗಿ ಖ್ಯಾತ ನಿರ್ದೇಶಕ ರಿಚರ್ಡ್ ಆಟನ್ ಬರೋ ಅವರ ನಿರ್ದೇಶನದ 'ಗಾಂಧಿ' ಚಲನ ಚಿತ್ರದಲ್ಲಿ ಗಾಂಧಿಯನ್ನು ರೈಲಿನಿಂದ ಆಚೆಗೆ ತಳ್ಳುವ ದೃಶ್ಯದ ತುಣುಕು ವಿಶಾಲ ತೆರೆಯ ಮೇಲೆ ಮೂಡಿಬಂತು. ಭಾರತ ಮತ್ತು ಅಮೇರಿಕಾದಿಂದ ಈ ವಿಶೇಷ ಕಾರ್ಯಕ್ರಮಕ್ಕಾಗಿ ಆಗಮಿಸಿದ್ದ ಭಾರತೀಯ ನಿಯೋಗದ ಸದಸ್ಯರು ಮತ್ತು ಭಾರತ ನೌಕಾದಳದ ಸೇನಾ ಅಧಿಕಾರಿಗಳು ಹಾಗೂ ದಕ್ಷಿಣ ಆಫ್ರಿಕಾದ ಜನರು ಕೈ ಚಪ್ಪಾಳೆ ತಟ್ಟಿ ಈ ರೈಲನ್ನು ಸ್ವಾಗತಿಸಿದರು. ಕಪ್ಪು ಸಮವಸ್ತ್ರ ಧರಿಸಿ ಅಲ್ಲಿ ಕುಳಿತಿದ್ದ ಭಾರತೀಯ ನೌಕಾದಳದ ಬ್ಯಾಂಡ್ ನವರು ದಕ್ಷಿಣ ಆಫ್ರಿಕಾ ಮತ್ತು ಭಾರತದ ರಾಷ್ಟ್ರ ಗೀತೆಗಳನ್ನು ನುಡಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಭಾರತ ನೌಕಾದಳದ ಯುದ್ಧ ನೌಕೆ 'ಐ ಎನ್ ಎಸ್ ತ್ರಿಶೂಲ್' ಈ ಸ್ಮರಣ ಕಾರ್ಯಕ್ರಮಕ್ಕಾಗಿಯೇ ಮುಂಬಯಿನಿಂದ ವಿಶೇಷವಾಗಿ ಡರ್ಬಾನ್ ಬಂದರಿಗೆ ಬಂದಿಳಿದಿತ್ತು. ಸುಮಾರು 300 ಮಂದಿ ನೌಕಾದಳದ ಅಧಿಕಾರಿ ಸಿಬ್ಬಂದಿಗಳು ಈ ಕಾರ್ಯಕ್ರಮಕ್ಕಾಗಿ ಈ ಯುದ್ಧ ನೌಕೆಯಲ್ಲಿ ಆಗಮಿಸಿದ್ದರು. ಭಾರತ ಮತ್ತು ದಕ್ಷಿಣ ಆಫ್ರಿಕಾದ ರಾಜತಾಂತ್ರಿಕ ಸಂಬಂಧಗಳು ಆರಂಭವಾಗಿ 30 ವರ್ಷಗಳು ತುಂಬುತ್ತಿರುವ ಸಂದರ್ಭದ ಸ್ಮರಣೆಗಾಗಿ ಈ ವರ್ಷಪೂರ್ತಿ ಇಂಥ ಹಲವಾರು ಕಾರ್ಯಕ್ರಮಗಳನ್ನು ದಕ್ಷಿಣ ಆಫ್ರಿಕಾದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಜೂನ್ 7ನೇ ತಾರೀಖಿನ ಕಾರ್ಯಕ್ರಮ ಕೂಡಾ ಈ ಸ್ಮರಣೆಯ ಅಂಗವಾಗಿತ್ತು. ಭಾರತ ನೌಕಾದಳದ ವಾದ್ಯ ಬ್ಯಾಂಡ್ ನವರು ಗಾಂಧೀಜಿಯವರ ನೆಚ್ಚಿನ ಭಜನೆ 'ವೈಷ್ಣವ ಜನತೋ ತೇನೆ ಕಹಿಯೇ' ಗೀತೆಯನ್ನು ನುಡಿಸಿ ನೆರೆದಿದ್ದ ಭಾರತೀಯ ಜನರ ಭಾವ ತುಂಬಿಸಿದರು.

ಈ ಕಾರ್ಯಕ್ರಮದಲ್ಲಿ ಚಾಲನಾ ಭಾಷಣ ಮಾಡಿದ ಕಪ್ಪು ಜನರ ಹೋರಾಟಗಳ ಇತಿಹಾಸ ತಜ್ಞ ಪ್ರೊ. ರೆವೆರೆಂಡ್ ಅಲನ್ ಬೊಸಾಕ್ ಅವರು "ಗಾಂಧೀಜಿಯವರನ್ನು ಮ್ಯಾರಿಟ್ ಬರ್ಗ್ ನಿಲ್ದಾಣದಲ್ಲಿ ರೈಲಿನಿಂದ ಹೊರದೂಡಿದ 1893ರ ಜೂನ್ 7ನೇ ತಾರೀಖು ಈಗ ಚಾರಿತ್ರಿಕ ದಿನವಾಗಿದೆ. ರೈಲಿನಿಂದ ಗಾಂಧಿಯವರನ್ನು ಹೊರ ದಬ್ಬಿದ ಆ ಕ್ಷಣ ಈಗ ಐತಿಹಾಸಿಕ ಕ್ಷಣವಾಗಿದೆ. ಅಂದು ಬಿಳಿಯರ ವರ್ಣ ದ್ವೇಷದಿಂದ ಅವಮಾನಿತರಾಗಿ ಅದರ ವಿರುದ್ಧ ಹೋರಾಟ ಮಾಡುವ ನಿರ್ಣಾಯಕ ನಿರ್ಧಾರವನ್ನು ತೆಗೆದುಕೊಂಡ ಗಾಂಧಿ ಈಗ ವಿಶ್ವಮಾನ್ಯರಾಗಿದ್ದಾರೆ. ಜಗತ್ತಿನಾದ್ಯಂತ ನಡೆದಿರುವ ಕಪ್ಪು ಜನರ ಎಲ್ಲ ಹೋರಾಟಗಳಿಗೆ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟವೇ ಸ್ಫೂರ್ತಿಯ ಸೆಲೆಯಾಗಿದೆ. ಅಮೇರಿಕಾದ ಕಪ್ಪು ಜನರ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ; ದಕ್ಷಿಣ ಆಫ್ರಿಕಾದ ಹೋರಾಟಗಾರ ನೆಲ್ಸನ್ ಮಂಡೇಲಾ ಅವರುಗಳು ಗಾಂಧೀಜಿಯವರ ಅಹಿಂಸಾ ಮಾರ್ಗವನ್ನೇ ಹಿಡಿದು ತಮ್ಮ ಹೋರಾಟದಲ್ಲಿ ಗೆಲುವು ಸಾಧಿಸಿದ್ದಾರೆ" ಎಂದು ಬಣ್ಣಿಸಿದರು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ 21 ವರ್ಷಗಳ ಕಾಲ ನಡೆಸಿದ ಸುದೀರ್ಘ ಹೋರಾಟವನ್ನು ದಕ್ಷಿಣ ಆಫ್ರಿಕಾದ



ಭಾರತ ನೌಕಾದಳದ ಬ್ಯಾಂಡ್ ..



ಭಾರತೀಯ ನೌಕಾದಳದ ಸೇನಾಧಿಕಾರಿಗಳು ..

ಪ್ರಜ್ಞಾವಂತ ಜನರು 130 ವರ್ಷಗಳ ನಂತರ ಈಗಲೂ ಪ್ರೀತಿ ವಿಶ್ವಾಸಗಳಿಂದ ನೆನೆಸಿಕೊಳ್ಳುತ್ತಾರೆ. ಇಲ್ಲಿನ ಕಪ್ಪು ಜನರ ಹೋರಾಟಗಾರರ ಜೊತೆ ಗಾಂಧೀಜಿಯವರ ಪ್ರತಿಮೆಗಳು ಕೂಡಾ ಇಲ್ಲಿವೆ. ಜೋಹಾನ್ಸ್ ಬರ್ಗ್ ನಗರದಲ್ಲಿ ಗಾಂಧಿ ಹೆಸರಿನ ಚೌಕವೇ ಇದೆ. ಅವರು ವಕೀಲರಾಗಿ ಇಲ್ಲಿ ನೆಲೆ ನಿಂತು ಕಪ್ಪು ಜನರ ಹೋರಾಟಗಳನ್ನು ಅಹಿಂಸಾತ್ಮಕ ನೆಲೆಯಲ್ಲಿ ಸಂಘಟಿಸಿದ ಗೌರವಾರ್ಥ ವಕೀಲಿ ಧಿರಿಸಿನಲ್ಲಿ ನಿಂತಿರುವ ಅವರ ಪ್ರತಿಮೆಯನ್ನು ಈ ಚೌಕದಲ್ಲಿ ನಿರ್ಮಿಸಲಾಗಿದೆ. ಇದು ಜಗತ್ತಿನ ಏಕೈಕ ವಕೀಲ ಗಾಂಧಿ ಪ್ರತಿಮೆ ಎಂದು ಹೆಸರಾಗಿದೆ.

ದಕ್ಷಿಣ ಆಫ್ರಿಕಾದ ಪ್ರಾಥಮಿಕ ಶಾಲೆಗಳ ಪುಸ್ತಕದಲ್ಲಿ ಗಾಂಧೀಜಿಯವರ ಕುರಿತ ಪಠ್ಯ ಇದೆ. ಅವರ ಹೆಸರಿನ ಸಂಘ ಸಂಸ್ಥೆಗಳಿವೆ. ಜೋಹಾನ್ಸ್ ಬರ್ಗ್, ಡರ್ಬಾನ್ ನಗರಗಳಲ್ಲಿ ಗಾಂಧಿ ವಾಸವಾಗಿದ್ದ ಮನೆಗಳನ್ನು ಈಗಲೂ ಸ್ಮಾರಕಗಳನ್ನಾಗಿ ಉಳಿಸಿ ಕೊಂಡಿದ್ದಾರೆ. ಅವರು ಜೋಹಾನ್ಸ್ ಬರ್ಗ್ ನಗರದ ಸಮೀಪ ಸ್ಥಾಪಿಸಿದ್ದ ಟಾಲ್ ಸ್ಟಾಯ್ ಆಶ್ರಮ, ಡರ್ಬಾನ್ ನಗರದ ಬಳಿಯ ಫೀನಿಕ್ಸ್ ಆಶ್ರಮ ಈಗಲೂ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಹಾಗೆ ನೋಡಿದರೆ ಗಾಂಧೀಜಿ ಭಾರತದ ನೆಲದಲ್ಲಿ ನಡೆಸಿದ ಹೋರಾಟಕ್ಕಿಂತಲೂ ದಕ್ಷಿಣ ಆಫ್ರಿಕಾದ ನೆಲದಲ್ಲಿ ನಡೆಸಿರುವ ಹೋರಾಟವೇ ಬಹಳ ಮಹತ್ವದ್ದು. ಇಲ್ಲಿ ಭಾರತದಲ್ಲಿ ಗಾಂಧೀಜಿ ಜೊತೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡಲು ನೆಹರು, ಪಟೇಲ್, ವಿನೋಭಾ, ಲಜಪತ್ ರಾಯ್, ರಾಜಾಜಿ ಅವರಂಥ ಎರಡು ಹಾಗೂ ಮೂರನೇ ಹಂತದ ನೂರಾರು ನಾಯಕರಿದ್ದರು. ದೇಶಾದ್ಯಂತ ಗಾಂಧಿಜಿ ಹೋರಾಟಕ್ಕೆ ಸ್ಪಂದಿಸುವ ಲಕ್ಷಾಂತರ ಮಂದಿ ಸ್ವಾತಂತ್ರ್ಯ ಹೋರಾಟಗಾರರಿದ್ದರು. ಆದರೆ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಒಬ್ಬರೇ ನಾಯಕರು. ಅವರ ಜೊತೆ ಸಮಾನವಾಗಿ ನಿಂತು ಹೋರಾಡುವ ಇನ್ನೊಬ್ಬ ನಾಯಕರು ಅವರ ಜೊತೆ ಇರಲಿಲ್ಲ.

ಇದಕ್ಕಿಂತಲೂ ಮಿಗಿಲಾಗಿ ದಕ್ಷಿಣ ಆಫ್ರಿಕಾದ ಬಿಳಿಯರ ಆಡಳಿತ ವರ್ಣದ್ವೇಷವನ್ನೇ ಉಸಿರಾಡುತ್ತಾ ಆಡಳಿತ ನಡೆಸುತ್ತಿತ್ತು. ಬಿಳಿಯರು ನಡೆದಾಡುವ ರಾಜಮಾರ್ಗದಲ್ಲಿ ಕಪ್ಪು ಬಣ್ಣದವರು ಕಾಲಿಡುವಂತಿಲ್ಲ. ಬಿಳಿಯರು ವಾಸ ಮಾಡುವ ಜಾಗದಲ್ಲಿ ಕಪ್ಪು ಜನರು ಇಣುಕಿ ನೋಡುವಂತಿಲ್ಲ ಎನ್ನುವ ಕೆಟ್ಟ ಪರಿಸ್ಥಿತಿ ದಕ್ಷಿಣ ಆಫ್ರಿಕಾದಲ್ಲಿತ್ತು .ಗುಲಾಮಗಿರಿಯ ಕರಾಳ ರೂಪದ ದರ್ಶನ ದಿನ ನಿತ್ಯ ಅಲ್ಲಿನ ಕಪ್ಪು ವರ್ಣಿಯರಿಗೆ ಮಾಮೂಲಿಯಾಗಿತ್ತು. ಇಂಥ ದುರ್ಭರ ಸನ್ನಿವೇಶದಲ್ಲಿ ಗಾಂಧಿ ನಡೆಸಿದ ದಿಟ್ಟ ಹೋರಾಟವನ್ನು ಅಂದಿನ ಕಾಲಮಾನ ಮತ್ತು ಅಂದಿನ ಬರ್ಬರ ವರ್ಣಬೇಧ ನೀತಿಯ ಹಿನ್ನೆಲೆಯಲ್ಲಿ ನೋಡಿದರೆ ಗಾಂಧೀಜಿಯವರ ಹೋರಾಟದ ವಿರಾಟ ದರ್ಶನವಾಗುತ್ತದೆ. ಅವರ ಹೋರಾಟದ ಕಿಚ್ಚಿನ ಬಗ್ಗೆ ಅಭಿಮಾನ ಉಕ್ಕಿ ಹರಿಯುತ್ತದೆ.

ದಕ್ಷಿಣ ಆಫ್ರಿಕಾದಲ್ಲಿ ಅಂದು ಗಾಂಧಿ ನಡೆಸಿದ ಹೋರಾಟದ ಬಗ್ಗೆ ಆಫ್ರಿಕಾದ ಇಂದಿನ ಕಪ್ಪು ಜನನಾಯಕರು ಈಗಲೂ ಪೂಜ್ಯಭಾವ ಇಟ್ಟು ಕೊಂಡಿದ್ದಾರೆ. ಅವರ ಮೇಲೆ ಈಗಲೂ ಅಭಿಮಾನದ ಮಳೆ ಸುರಿಸುತ್ತಾರೆ. ಇಂದಿನ ಪ್ರಜ್ಞಾವಂತ ಯುವಜನರೂ ಈಗಲೂ ಗಾಂಧಿಯವರ ಅಹಿಂಸಾ ಹೋರಾಟದ ಬಗ್ಗೆ ಮನದುಂಬಿ ಮಾತನಾಡುತ್ತಾರೆ. ಅವರ ಮೆಚ್ಚುಗೆಯ ಮಾತುಗಳನ್ನು ಆಲಿಸಿವುದೇ ಒಂದು ಆನಂದ. ವರ್ಣಬೇಧ ನೀತಿಯ ಅವಮಾನದಿಂದ ಬಳಲುತ್ತಿದ್ದ ದಕ್ಷಿಣ ಆಫ್ರಿಕಾದ ಕಪ್ಪು ಜನರು ಈಗ ತಮ್ಮದೇ ನೆಲದಲ್ಲಿ ಸ್ವಾತಂತ್ರ್ಯದ ಸವಿ ಅನುಭವಿಸುತ್ತಿರುವ ನೋಟವನ್ನು ಕಣ್ಣಾರೆ ನೋಡುವುದೇ ಒಂದು ಸೊಗಸು. ದಕ್ಷಿಣ ಆಫ್ರಿಕಾ ಪ್ರವಾಸದ ನಂತರ ಗಾಂಧೀಜಿ ಬಗೆಗಿನ ನಮ್ಮ ಪ್ರೀತಿ ಅಭಿಮಾನದ ನೋಟ ಈಗ ಇನ್ನೂ ನಿಚ್ಚಳವಾಗಿದೆ.

ನೋಬೆಲ್ ಪ್ರಶಸ್ತಿ ವಿಜೇತ ಮಹಾ ಕವಿ ರವೀಂದ್ರನಾಥ್ ಟ್ಯಾಗೋರ್ ಅವರು ಗಾಂಧೀಜಿಯವರನ್ನು ಅಭಿಮಾನದಿಂದ **'ಮಹಾತ್ಮ'** ಎಂದು ಮೊಟ್ಟ ಮೊದಲ ಬಾರಿಗೆ ಸಂಭೋದಿಸಿ ಅವರನ್ನು ಗೌರವಿಸಿದರು. ಅಂದಿನಿಂದ ಗಾಂಧಿ **"ಮಹಾತ್ಮ ಗಾಂಧೀಜಿ"** ಎಂದೇ ಈಗ ಎಲ್ಲೆಡೆ ಖ್ಯಾತಿಯಾಗಿದ್ದಾರೆ.

ವಿಶ್ವ ಖ್ಯಾತಿಯ ವಿಜ್ಞಾನಿ ಅಲ್ಬರ್ಟ್ ಐನ್ ಸ್ಟೀನ್ ರವರು "ರಕ್ತ ಮಾಂಸಗಳಿಂದ ಕೂಡಿದ ಇಂಥ ಮನುಷ್ಯ ಈ ಭೂಮಿಯ ಮೇಲೆ ನಡೆದಾಡಿದರು ಎನ್ನುವ ವಿಷಯವನ್ನು ಮುಂದಿನ ಪೀಳಿಗೆಯ ಜನ ನಂಬುವುದು ಬಹಳ ಕಷ್ಟ" ಎಂದು ಹೇಳುವ ಮೂಲಕ ಗಾಂಧಿಯವರಿಗೆ ಜಗತ್ತಿನಲ್ಲಿ ವಿಶಿಷ್ಟ ರೂಪಕವನ್ನು ನೀಡಿದರು.

ಗಾಂಧಿಯವರ ದಕ್ಷಿಣ ಆಫ್ರಿಕಾ ಹೋರಾಟ ಮತ್ತು ಭಾರತ ಸ್ವಾತಂತ್ರ್ಯದ ಅಹಿಂಸಾ ಸಂಗ್ರಾಮ, ಭಾರತೀಯ ಸಮಾಜದ ಸುಧಾರಣೆಗಾಗಿ ತನ್ನ ಪ್ರಾಣವನ್ನೇ ಅರ್ಪಣೆ ಮಾಡಿದ ಮಹಾತ್ಮ ಗಾಂಧೀಜಿ ಈಗ ನಮ್ಮ ಕಣ್ಣಿಗೆ **'ದೇವದೂತ'**ರಂತೆ ಕಂಗೊಳಿಸುತ್ತಿದ್ದಾರೆ.

■

ವಿಶ್ವವ್ಯಾಪಿ ಬಾಪೂ



ಖಜಕಿ ಸ್ಥಾನದ ದೊಡ್ಡ ನಗರ ಅಲ್ಮಾಟಿಯಲ್ಲಿ ಮಹಾತ್ಮ ಗಾಂಧಿ ಹೆಸರಿನಲ್ಲಿ ಒಂದು ಉದ್ಯಾನವನವಿದೆ. ಈ ಪಾರ್ಕಿನ ಮಧ್ಯದಲ್ಲಿ ಗಾಂಧೀಜಿ ಅವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಕಜಖಸ್ತಾನದಂಥ ರಾಷ್ಟ್ರದಲ್ಲಿ ಮಹಾತ್ಮ ಗಾಂಧೀಜಿಯವರ ಸ್ಮರಣೆಗಾಗಿ ಪ್ರತಿಮೆ ನಿರ್ಮಿಸಿರುವುದು ಮತ್ತು ಉದ್ಯಾನವನ್ನು ರೂಪಿಸಿರುವುದು ಗಾಂಧೀಜಿಯವರಿಗೆ ಆ ರಾಷ್ಟ್ರ ಸಲ್ಲಿಸಿರುವ ಗೌರವವಾಗಿದೆ. ನಿಂತ ಭಂಗಿಯಲ್ಲಿರುವ ಈ ಕಂಚಿನ ಪ್ರತಿಮೆಯ ನಾಲ್ಕೂ ಕಡೆಗಳಲ್ಲಿ ಗಾಂಧೀಜಿ ಅವರ ಘೋಷವಾಕ್ಯಗಳನ್ನು ರಷ್ಯನ್, ಕಝುಕ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ, ಕಲ್ಲಿನಲ್ಲಿ ಕೆತ್ತಲಾಗಿದೆ.



ಗಾಂಧಿ ಮತ್ತು ಕರ್ನಾಟಕ

ಭಾಗ –2

ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲೆ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

ಡಾ. ಹೋ. ಶ್ರೀನಿವಾಸಯ್ಯ



ಗಾಂಧೀಜಿಯ ಭೇಟಿ, 1915–1921

ಮೊದಲ ಬಾರಿ ಕಾಂಗ್ರೆಸ್ ಸೇರಿದಾಗ ಗಾಂಧೀಜಿಗೆ 15 ವರ್ಷ ಆಗಿತ್ತು ಇನ್ನೂ ವಿದ್ಯಾರ್ಥಿ ದೆಸೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಜನ ಬದುಕಲಿಕ್ಕೆ ಎಂದು ಕೂಲಿಕಂಬಳಿಗಾಗಿ ದೂರದ ದಕ್ಷಿಣ ಆಫ್ರಿಕಾಕ್ಕೆ ಹೋದರು. ಅಲ್ಲಿ ರಾಜ್ಯ ನಡೆಸುತ್ತಿದ್ದವರು ; ಅಲ್ಲಿಗೆ ಹೋಗಿ ನೆಲೆಸಿ ವಸಾಹತು ಕಟ್ಟಿಕೊಂಡ ಬಿಳಿ–ಕೆಂಪು ಜನ. ಅವರ ವ್ಯವಸಾಯಕ್ಕೆ, ಅವರ ತೋಟಗಾರಿಕೆಗೆ, ಕೆಲಸಗಾರರು ಬೇಕಾಗಿತ್ತು. ಭಾರತದಲ್ಲಿ ಇದ್ದರಲ್ಲ ಕೂಲಿಗಾರರು! ಬಿಳಿ – ಕೆಂಪು ಜನರು ಅವರನ್ನು ಕೆಲವು ಕರಾರು ಮಾಡಿಕೊಂಡು ದಕ್ಷಿಣ ಆಫ್ರಿಕಾಕ್ಕೆ ಕರೆದೊಯ್ದರು. ಅಲ್ಲಿ ಅವರನ್ನು "ಕರಾರು ಕೂಲಿಗಳು' ಎಂದು ಕರೆಯತೊಡಗಿದರು. ನಮ್ಮ ಶ್ರಮಿಕ ಜನ ಅಲ್ಲಿಗೆ ಹೋದರೋ ಇಲ್ಲವೋ ಅವರ ಹಿಂದೆಯೇ ನಮ್ಮ ವರ್ತಕರೂ ಹೋದರು. ನಮ್ಮ ಜೀವನದ ಮಟ್ಟ ಬಿಳಿಯರ ಜೀವನದ ಮಟ್ಟಕ್ಕಿಂತ ತಗ್ಗು. ಅಂದರೆ ಅವರ ಜೀವನದ ಅವಶ್ಯಕತೆಗಳು ನಮಗಿಂತ ಹೆಚ್ಚು; ಅವರು ಹಾಗೆ ಜೀವನವನ್ನು ಬೆಳೆಸಿಕೊಂಡು ಬಿಟ್ಟಿದಾರೆ. ಇದರಿಂದಾಗಿ ನಮ್ಮವರಿಗೆ ಕೈಯಲ್ಲಿ ಸ್ವಲ್ಪ ಕಾಸು ಆಡಿತು. ಅಲ್ಲಿಯೇ ನೆಲೆಸುವ ಪ್ರಯತ್ನ ಮಾಡಿದರು. ಮನೆ ಮಾರು, ಹೊಲ ಹಸಿರು ಮಾಡಿಕೊಂಡರು. ಆದರೇನು? ನಮ್ಮವರು ಎಂಥವರೇ ಆಗಲಿ, ಎಷ್ಟು ಉನ್ನತ ಮಟ್ಟದ ಜನರೇ ಆಗಲಿ, ಅವರಿಗೆ 'ಕೂಲಿಗಳು' ಎಂಬ ಹೆಸರು ತಪ್ಪಲಿಲ್ಲ. ಗಾಂಧೀಜಿ ದಕ್ಷಿಣ ಆಫ್ರಿಕಾಕ್ಕೆ 1893ರಲ್ಲಿ ವಕೀಲರಾಗಿ ಹೋದರು. ಅವರೂ ಸಹ ಅಲ್ಲಿ "ಕೂಲಿ ಬ್ಯಾರಿಸ್ಟರ್' ಎನಿಸಿಕೊಂಡರು.

ದಕ್ಷಿಣ ಆಫ್ರಿಕಾದಲ್ಲಿನ ಪರಿಸ್ಥಿತಿಯನ್ನು ಎದುರಿಸಿ ಗಾಂಧೀಜಿ ದೀರ್ಘಕಾಲ ಹೋರಾಟ ನಡೆಸಿದರು. ಸಮುದ್ರ ಮಥನದಲ್ಲಿ ಅಮೃತ ಹುಟ್ಟಿ ಬಂದಂತೆ ಆ ಹೋರಾಟದಲ್ಲಿ ಹುಟ್ಟಿ ಬಂದದ್ದು ಸತ್ಯಾಗ್ರಹ. ಆ ಸತ್ಯಾಗಹವನ್ನೇ ಭಾರತಕ್ಕೆ ಮರಳಿ ಬಂದ ಮೇಲೂ ಪ್ರಯೋಗಿಸಿದರು. ಗಾಂಧೀಜಿಯ ದಕ್ಷಿಣ ಆಫ್ರಿಕಾದ ಸತ್ಯಾಗ್ರಹದ ಆ ಕಥೆ ರೋಮಾಂಚಕಾರಿ. ಗಾಂಧೀಜಿಯೇ ಸ್ವಯಂ ಆ ಕಥೆಯನ್ನು ಹೇಳಿದ್ದಾರೆ. "ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ " ಎಂಬ ಪುಸ್ತಕ ಅದು. ದೇಶವನ್ನು ಗುಲಾಮಗಿರಿಯಿಂದ ಬಿಡಿಸಿ ಅದರಲ್ಲಿ ಹೊಸ ಜೀವನವನ್ನು ತುಂಬುವ ವಿಚಾರ ಕೆಲವರು ದೇಶವಾಸಿಗಳಲ್ಲಿ ಬಂತು. ಆ ಕೆಲಸಕ್ಕಾಗಿ ಪ್ರಾರಂಭ ಆದದ್ದೇ ಕಾಂಗ್ರೆಸ್ಸು.

ಕೆಲವೇ ದಿನಗಳಲ್ಲಿ ಕಾಂಗ್ರೆಸ್ಸಿನಲ್ಲಿ ಇಬ್ಬಾಗ ಆಯಿತು. ಒಂದು ಮಿತವಾದಿ ಗುಂಪು , ಇನ್ನೊಂದು ಉಗ್ರಗಾಮಿ ಗುಂಪು . ಪ್ರಾರಂಭದಲ್ಲಿ ಕಾಂಗ್ರೆಸ್ಸು ಮಿತವಾದಿಯೆ. 1905–06 ರಲ್ಲಿ ಕಾಂಗ್ರೆಸ್‌ನಲ್ಲಿ ತೀವ್ರತೆ ಹೆಚ್ಚಿತು.ಆ ಕಥೆ ಬಲು ಸ್ವಾರಸ್ಯ. ಕಾಂಗ್ರೆಸ್ಸಿನ ಇದೆಲ್ಲ ಇತಿಹಾಸವನ್ನೂ ಡಾ। ಪಟ್ಟಾಭಿ ಸೀತಾರಾಮಯ್ಯ ಅವರು. (History of the Indian National Congress) ಎನ್ನುವ ಎರಡು ದೊಡ್ಡ ಸಂಪುಟಗಳಲ್ಲಿ ಬರೆದಿದ್ದಾರೆ.

ಭಾರತದ ಅಂದಿನ ಕ್ರಾಂತಿಕಾರರ ಆಂದೋಲನ ಗಾಂಧೀಜಿ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟಾಗ ಇದ್ದ ಇನ್ನೂ ಒಂದು ಅಂಶವನ್ನು ಗಮನಿಸುವುದು ಸಮರ್ಪಕವಾಗಿದೆ. ಅದೆಂದರೆ, ರಾಷ್ಟ್ರ ಪ್ರೇಮದಿಂದ ಪ್ರೇರಿತರಾದ ಅಂದಿನ ಕ್ರಾಂತಿಕಾರರ ಮಾರಕ ಕಾರ್ಯವ್ಯೂಹದ ವಿಚಾರ. ಸ್ವಾತಂತ್ರ್ಯ ಕಾತರರಾದ ದೇಶದ ಅಂದಿನ ತರುಣ ವರ್ಗ, ಆಗ ಸ್ವಾಭಾವಿಕವಾಗಿಯೇ ಹಿಂಸಾಮಾರ್ಗದಲ್ಲಿ ಮುಂದುವರಿಯುತ್ತ ತಮ್ಮ ಪ್ರಾಣವನ್ನೇ ಪಣವಿಟ್ಟು ಸಂಘಟಿತರಾಗುತ್ತಿದ್ದರು. ಈ ಸಂಘಟನೆಯ ಫಲವಾಗಿ ಕ್ರಾಂತಿಕಾರರ ಸಂಘಗಳು ಅಲ್ಲಲ್ಲಿ ತಲೆ ಎತ್ತಿದವು. ಭಾರತದ ದಾಸ್ಯ

ವಿಮೋಚನೆಯ ವಿಷಯದಲ್ಲಿ ಕ್ರಾಂತಿಕಾರರಿಗೆ ಹಿಂಸೆಯೇ ಗುರಿಯಾಗಿದ್ದರೆ, ಗಾಂಧೀಜಿಗೆ ಅಂದಿನ ಪರಿಸ್ಥಿತಿಯಲ್ಲಿ ಅಹಿಂಸಾತ್ಮಕ ಅಸಹಕಾರವು ಸ್ವಾತಂತ್ರ್ಯ ಪ್ರಾಪ್ತಿಯ ಕಾರ್ಯಕ್ಕೆ ತಕ್ಕ ಅಸ್ತ್ರವಾಗಿ ರೂಪುಗೊಂಡಿತು ಮತ್ತು ಈ ಅಸ್ತ್ರದಿಂದಲೇ ಅವರು ಕೊನೆಗೆ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಇದು ಈಗ ಎಲ್ಲರೂ ಬಲ್ಲ ಸಂಗತಿಯೇ ಆಗಿದೆ.

'ಸಿಪಾಯಿ ದಂಗೆ' ಎಂದು ಹೆಸರಾದ ಭಾರತದ ದಾಸ್ಯ ವಿಮೋಚನೆಯು 1857 ರಲ್ಲಿ ಸ್ಫೋಟಿಸಿತು. ಇದಕ್ಕೂ ಮುನ್ನವೇ ಆರಂಭವಾಗಿದ್ದ 'ವಂಗಭಂಗ ಚಳವಳಿ' ಗೆ ಭಾರತದಲ್ಲಿ ತಕ್ಕ ಮಟ್ಟಿನ ಬೆಂಬಲ ಸಿಕ್ಕಿತ್ತು . ಅದರಲ್ಲೂ ಬಂಗಾಲದಲ್ಲಿ ಕ್ರಾಂತಿಕಾರಕ ವಿಚಾರಗಳು ಕಾರ್ಯರೂಪಕ್ಕೆ ಬರತೊಡಗಿದ್ದವು. ಮುಂದೆ ' ವಂಗಭಂಗ' ಚಳವಳಿಯಿಂದ ಈ ದಿಸೆಯಲ್ಲಿ ಹೆಚ್ಚಿನ ಪ್ರಚೋದನೆ ಉಂಟಾಯಿತು. ಹೇಗಾದರೂ ಮಾಡಿ, ಭಾರತದ ಸೈನ್ಯದ ಸಹಾಯ ಪಡೆದು, ತನ್ಮೂಲಕ ಶಸ್ತ್ರ ಬಲದಿಂದ ಬ್ರಿಟಿಷರನ್ನು ಹೊರದೂಡಲು ಕ್ರಾಂತಿಕಾರರು ಅಲ್ಲಲ್ಲಿ ಸಂಘಟಿತರಾಗಿ ಹೊಂಚು ಹಾಕಿದ್ದರು ಮತ್ತು ಸಂಚು ಹೂಡಿದ್ದರು. ಇದರ ಜೊತೆಗೆ ದೊಡ್ಡ ದೊಡ್ಡ ಬ್ರಿಟಿಷ್ ಅಧಿಕಾರಿಗಳ ಪ್ರಾಣ ತೆಗೆದುಕೊಳ್ಳುವುದು ಕ್ರಾಂತಿಕಾರರ ಕಾರ್ಯಕ್ರಮಗಳಲ್ಲಿಯೂ ಅವರು ಕೈಕೊಂಡ ಪ್ರತಿಜ್ಞೆಯಲ್ಲಿಯೂ ಒಂದಾಗಿತ್ತು.

ಇದಕ್ಕೆ ಅನುಗುಣವಾಗಿ, ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬರುವ ಹೊತ್ತಿಗೆ, ಕ್ರಾಂತಿಕಾರರು ಅನೇಕ ಬ್ರಿಟಿಷ್ ಅಧಿಕಾರಿಗಳ ಪ್ರಾಣಾಹುತಿ ತೆಗೆದುಕೊಂಡಿದ್ದರು. ಇಷ್ಟೇ ಅಲ್ಲ, ಈ ಸಂದರ್ಭದಲ್ಲಿ ಪ್ರಥಮ ಜಾಗತಿಕ ಮಹಾಯುದ್ಧದ ಲಾಭವನ್ನು ಪಡೆಯಲು ಕ್ರಾಂತಿಕಾರರು ತುಂಬ ಉತ್ಸುಕರಾಗಿದ್ದರು. ಆದರೆ ಗಾಂಧೀಜಿಯ ಅಭಿಪ್ರಾಯವು ಇದಕ್ಕೆ ತದ್ವಿರುದ್ಧವಾಗಿತ್ತು. ಕ್ರಾಂತಿಕಾರರ ಉದಯದ ವಿಷಯ ಉಲ್ಲೇಖಿಸುತ್ತ ಶ್ರೀ ಅರವಿಂದರು, ಪಿ.ಮಿತ್ರ ಮತ್ತು ಘೋಷಾಲ್ ಇವರು ಬ್ಯಾರನ್ ಓಕಾಕುರಾ (Baron Okakura) ಎಂಬವರಿಂದ ಸ್ಫೂರ್ತಿ ಪಡೆದು ಕ್ರಾಂತಿಕಾರಕ ಸಂಘ ಪ್ರಾರಂಭಿಸಿದರು ಎಂದು ಒಂದು ಕಡೆ ಹೇಳಿದ್ದಾರೆ. ಕ್ರಾಂತಿಕಾರರ ಜಾಲ ಬಂಗಾಲ, ಬಿಹಾರ, ಪಂಜಾಬ, ಮಧ್ಯ ಪ್ರದೇಶ, ಮಹಾರಾಷ್ಟ್ರ ಕಡೆಗಳಲ್ಲಿ ಹಬ್ಬಿತ್ತು ಇಷ್ಟೇ ಅಲ್ಲ ಇದರ ಪ್ರಭಾವ ಕರ್ನಾಟಕದ ಬೆಳಗಾವಿಯವರೆಗೂ ಬಂದು ತಲುಪಿತ್ತು. ಅಂದಿನ ಬ್ರಿಟಿಷ್ ಸರಕಾರದ ತೀವ್ರ ಸ್ವರೂಪದ ದಬ್ಬಾಳಿಕೆಗೆ ಸಹ ಮಣಿಯದೆ ವಿಧ್ವಂಸಕ ಗುಪ್ತ ಕಾರ್ಯಗಳು ನಡೆಯುತ್ತಲೇ ಇದ್ದವು. ಇದಕ್ಕೆ ಸಾಕ್ಷಿ ಸ್ವರೂಪವಾಗಿ, ಬಂಗಾಲದ ಡಿ.ಐ.ಜಿ 28–1–1915 ರಲ್ಲಿ ಅಂದಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಕೊಟ್ಟ ಹೇಳಿಕೆಯ ಕೆಲ ಮಾತುಗಳನ್ನು ಉದ್ಧರಿಸಬಹುದು .

" The forces of revolution have in no way relaxed their activity and, ... this extremely well organized movement defies all our efforts at repression and is considerably more virile and troublesome at the beginning of 1915 than it has been in the past."

ಇದರ ಸಾರಾಂಶ: ಪ್ರಯತ್ನಗಳನ್ನು ಲೆಕ್ಕಿಸುವುದೇ ಇಲ್ಲ, ಇಷ್ಟೇ ಅಲ್ಲ, 1915ರ ಆದಿಯಲ್ಲಿ ಅದು ಹಿಂದೆಂದಿಗಿಂತಲೂ ಇನ್ನೂ ಹೆಚ್ಚು ಪ್ರಬಲವಾಗಿದೆ ಹಾಗೂ ಪೀಡಾಕಾರಕವಾಗಿದೆ"

ಶ್ರೀ ಅರವಿಂದರು ಮತ್ತು ಶ್ರೀ ಸಾವರಕರರಂಥ ವಿಚಾರಶೀಲರ ವಿಚಾರಗಳು ಕೂಡ ಅತ್ತ ಹೊರಳಿದ್ದವು. ಒಟ್ಟಿನಲ್ಲಿ, ಇಂಥ ರಾಜಕೀಯ ಹಿನ್ನೆಲೆ



ಗಾಂಧೀಜಿ ಗುರು – ಗೋಪಾಲ ಕೃಷ್ಣ ಗೋಖಲೆ

ಇದ್ದಾಗ, ಗಾಂಧೀಜಿ ತಮ್ಮ ಅಹಿಂಸಾತ್ಮಕ ಅಸಹಕಾರದ ಅಸ್ತ್ರದೊಂದಿಗೆ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟರು. ಇದನ್ನು ತೂಗಿ ನೋಡಿದ್ದಾದರೆ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಅಹಿಂಸಾತ್ಮಕ ವಿಷಯವು ಬಹಳ ದೊಡ್ಡ ಘಟನೆಯೇ ಆಗಿದೆಯಲ್ಲದೆ.. ಗಾಂಧೀಜಿಯ ಕಾರ್ಯ ಪ್ರಭಾವ ಬಹುಬೇಗ ವ್ಯಾಪಿಸಿ, ರಾಷ್ಟ್ರಾದ್ಯಂತ ಅದು ನವಜಾಗೃತಿಯನ್ನೇ ಉಂಟುಮಾಡಿತು. ಈ ಕಾಲಕ್ಕೆ ಸರಿಯಾಗಿ ಗಾಂಧೀಜಿ ಒಂದು ವೇಳೆ ತಮ್ಮ ಅಹಿಂಸಾತ್ಮಕ ಅಸಹಕಾರ, ಖಾದಿ ಪ್ರಸಾರ ಮತ್ತು ಸತ್ಯಾಗ್ರಹದಂಥ ಸಾತ್ವಿಕ, ಆದರೂ ಸತ್ವಸಂಪನ್ನ ಅಸ್ತ್ರಗಳೊಂದಿಗೆ ಬಂದಿರದಿದ್ದರೆ ಭಾರತ ದೇಶ ಯಾವ ದಿಸೆಯಲ್ಲಿ ಹೆಜ್ಜೆ ಹಾಕುತ್ತಿತ್ತೋ ಹೇಳಲು ಬಾರದು.

ಅಂದಿನ ಕಾಂಗ್ರೆಸ್ ಹೋರಾಟದಲ್ಲಿ ಮಂದವಾದಿಗಳ ಗುಂಪಿಗೆ ಗೋಪಾಲ ಕೃಷ್ಣ ಗೋಖಲೆ ಮತ್ತು ತೀವ್ರವಾದಿಗಳ ಗುಂಪಿಗೆ ಬಾಲಗಂಗಾಧರ ತಿಲಕ್ ನಾಯಕರುಗಳಾಗಿದ್ದರು. ಇಬ್ಬರದೂ ಒಂದೊಂದು ತರದ ಸ್ವಭಾವ. ಇಬ್ಬರ ಮಾತಿನಲೂ ಹೊಸದು ಏನೂ ಇರದಿದ್ದರೂ ಆಹಾರ ಇರುತ್ತಿತ್ತು. ತಿಲಕರು ಜನಭಾಷೆಯ ಮಾತಾಡುತ್ತಿದ್ದರು. ಅವರಿಗೆ ತಿಳಿಯುವಂತೆ ದಿನ ಬಳಕೆಯ ಉಪಮಾನ ಕೊಡುತ್ತಿದ್ದರು.

1906ರಲ್ಲಿ ಅವರು ಮೊದಲು ಬೆಳಗಾಂವಿಗೆ ಬಂದಾಗ ಅವರ ಮಾತಿನಿಂದ ಜನರ ಮೇಲೆ ಅದ್ಭುತ ಪರಿಣಾಮ ಆಯಿತು. ಹಳ್ಳಿಯ ಜನರಿಗೆ ತಿಳಿಯುವ ಹಾಗೆ ತಿಲಕರು ಗೋಕಾಕ್ ಗಿರಣಿಯ ಉದಾಹರಣೆ ಕೊಟ್ಟು ಸ್ವದೇಶಿ–ಬಹಿಷ್ಕಾರಗಳ ತತ್ವವನ್ನು ವಿವರಿಸಿದರು.

ಆಗ ಬೆಳಗಾಂವಿಯ ಕಡೆ ಇದ್ದದ್ದು ಗೋಕಾಕ ಗಿರಣಿ ಒಂದೇ. ಗೋಕಾಕ್ ಗಿರಣಿ ಬಂಡವಾಳ 20 ಲಕ್ಷ ರೂಪಾಯಿ. ಪ್ರತಿವರ್ಷವೂ ಭಾರತದಿಂದ ಬಟ್ಟೆಗಳ ಖರೀದಿಗಾಗಿ ಇಂಗ್ಲೆಂಡಿಗೆ ಎಷ್ಟು ಹಣ ಹರಿದು ಹೋಗುತ್ತದೆ ಗೊತ್ತೇ ? ಪ್ರತಿ ವರ್ಷವೂ 40–50 ಕೋಟಿ ಬಟ್ಟೆಗಾಗಿ ಭಾರತದಿಂದ ಇಂಗ್ಲೆಂಡಿಗೆ ಹೋಗುತ್ತಿದೆ. ಅದೇ ರೂಪಾಯಿ ನಮ್ಮಲ್ಲೇ ಉಳಿದರೆ ಗಿರಣಿ 200–250 ಕಟ್ಟಬಹುದು ಎಂದರು. ಈ ಮಾತಿನಿಂದ ಸ್ವದೇಶಿಯ ಪ್ರಚಾರವೂ ಆಯಿತು, ವಸ್ತ್ರ ಬಹಿಷ್ಕಾರದ ಪ್ರಚಾರವೂ ಆಯಿತು.

ಲೋಕಮಾನ್ಯ ತಿಲಕ್‌ರವರು ವಿದೇಶಿ ವಸ್ತ್ರ ಬಹಿಷ್ಕಾರ ಕಾರ್ಯಕ್ರಮಗಳನ್ನು ರಾಜಕಾರಣದಲ್ಲಿ ಬೆರೆಸಿ ರಾಷ್ಟ್ರೀಯತೆಯನ್ನು ತಿಲಕರು ಹಳ್ಳಿಯ ಬಯಲಿನಲ್ಲಿ, ಸಂತೆಮಾಳದಲ್ಲಿ ಬಿತ್ತಿದರು. ಜನತೆಯನ್ನು ಹುರಿದುಂಬಿಸಿದರು. ಎಲ್ಲೆಲ್ಲೂ ರಾಷ್ಟ್ರೀಯತೆಯ ಸ್ಫೂರ್ತಿ ಸೆಲೆ ಒಡೆಯಿತು. ತಿಲಕರು ರಾಷ್ಟ್ರೀಯತೆಯನ್ನು ಜನತೆಯಲ್ಲಿ ಬಿತ್ತಿದ್ದಲ್ಲದೆ, ರಾಷ್ಟ್ರೀಯತೆ ಸಫಲ ಆಗಲು ತ್ಯಾಗ ಬಲಿದಾನಗಳು ಅತ್ಯಗತ್ಯವೆಂಬುದನ್ನು ತೋರಿಸಿಕೊಟ್ಟರು"

ಯಾರೋ ಒಬ್ಬರು ಅವರನ್ನು ಕೇಳಿದರು: " ಸ್ವರಾಜ್ಯ ಬಂದ ಮೇಲೆ ನೀವು ಏನು ಮಾಡುತ್ತೀರಿ?" ಯಥಾ ಪ್ರಕಾರ ಮತ್ತೆ ನನ್ನ ಗಣಿತ ಪಾಠ ಹೇಳಲು ಹೋಗುತ್ತೇನೆ' ಎಂದು ಉತ್ತರ ನೇರಾಗಿ ಬಂತು . 1905ರಲ್ಲಿ ಬೆಳಗಾವಿಗೆ ತಿಲಕರು ಬಂದಿದ್ದಾಗ ಅವರನ್ನು ಇನ್ನೂ ಯಾರೋ ಒಬ್ಬರು ಕೇಳಿದರು " ನಾಳೆ ನಮಗೇ ಅಧಿಕಾರ ಬಂದರೆ ಏನು ಮಾಡುತ್ತೀರಿ?"

ಅವರು ಉತ್ತರಿಸಿದರು; "ಈಗ ಮಾಡಿದ್ದನ್ನ ಈಗಿನ ಹಾಗೆಯೆ ಆಗ ಅಧಿಕಾರಕ್ಕೆ ಬಂದವರ ದೋಷಗಳನ್ನು ಎತ್ತಿ ತೋರಿಸುತ್ತ ನನ್ನ ಪ್ರಯತ್ನ ಮಾಡುತ್ತೇನೆ."

ಗಾಂಧೀಜಿ ತಿಲಕರ ಸಾಲಿನಲ್ಲಿ

ಮುಂದೆ 1908ರಲ್ಲಿ ಬ್ರಿಟಿಷ್ ಸರಕಾರ ತಿಲಕರ ಮೇಲೆ ರಾಜದ್ರೋಹದ ಖಟ್ಲೆ ಹೂಡಿ, 6 ವರ್ಷ ಶಿಕ್ಷೆ ಕೊಟ್ಟಿತು. ಸೆರೆಯಲ್ಲಿ ಇಟ್ಟರೂ ಅವರನ್ನು ಈ ದೇಶದಲ್ಲಿಯೇ ಇಡಬಾರದು ಎಂದು ಲೆಕ್ಕ ಹಾಕಿ ತಿಲಕರನ್ನು ಬರ್ಮಾದ ಮಂಡಾಲೆ ಸೆರೆಮನೆಗೆ ಕಳುಹಿಸಿತು. ಅವರು ಅಲ್ಲಿಯೇ "ಗೀತಾರಹಸ್ಯ" ಬರೆದದ್ದು. ಮುಂದೆ ಇಂಥದೇ ರಾಜದ್ರೋಹದ ಖಟ್ಲೆಯನ್ನು ಸರಕಾರ 1922ರಲ್ಲಿ ಗಾಂಧೀಜಿಯ ಮೇಲೆಯೂ ಹಾಕಿತು. ಅವರಿಗೂ 6 ವರ್ಷ ಶಿಕ್ಷೆ ಕೊಟ್ಟಿತು. ಆಗ ಗಾಂಧೀಜಿ ತಿಲಕರ ಮೇಲಿನ ಈ ಮೊಕದ್ದಮೆಯನ್ನೂ ಅವರಿಗೆ ಆದ ಶಿಕ್ಷೆಯನ್ನೂ ನೆನಪು ಮಾಡಿಕೊಂಡು, ಅಂಥ ಮಹಾಮಹಿಮರ ಸಾಲಿಗೆ ತಮ್ಮನ್ನು ಸೇರಿಸಿ ಗೌರವಿಸಿದ್ದಕ್ಕಾಗಿ ನ್ಯಾಯಾಧೀಶರಿಗೆ ವಂದನೆ ಅರ್ಪಿಸಿದರು.

ಕರ್ನಾಟಕದಲ್ಲಿ ...

ಹೀಗೆ ಕರ್ನಾಟಕದಲ್ಲಿ ತಿಲಕರ ಪ್ರಭಾವದಿಂದ ರಾಷ್ಟ್ರೀಯತೆ ಮೂಡಿತ್ತು. ರಾಜಕೀಯ ಜಾಗೃತಿ ಆಗಿತ್ತು. ದಿವಂಗತ ದೇಶಪಾಂಡೆ ಗಂಗಾಧರರಾಯರು ಬೆಳಗಾವಿಯ ರಾಜಕೀಯದಲ್ಲಿ ಕಾಲಿಟ್ಟು ಸಾಕಷ್ಟು ಪ್ರಭಾವ ಗಳಿಸಿಕೊಂಡಿದ್ದರು . 1906ರಲ್ಲಿ ಕಲಕತ್ತೆಯಲ್ಲಿ ಕಾಂಗ್ರೆಸ್ ನಡೆಯಿತು.ಅಲ್ಲಿ ತಿಲಕರು "ಹೊಸ ಪಕ್ಷದ ತತ್ವಗಳು' - Tenets of the New party ಎಂಬ ಭಾಷಣ ಮಾಡಿ, ತಮ್ಮ ಕಾರ್ಯಕ್ರಮದ ರೂಪುರೇಖೆಗಳನ್ನು ವಿವರಿಸಿದರು. ತುಂಬ ಓಜಸ್ವಿ ಭಾಷಣ ಅದು. ಅದರಲ್ಲಿ ಗಾಂಧೀಜಿಯ ಪದ್ಧತಿಯ ಚರ್ಚೆ ಇರಲಿಲ್ಲ. ಆಗ ಅದಕ್ಕೆ ಕಾಲವೂ ಅಲ್ಲ. ಆದರೆ ಮುಂದೆ ಗಾಂಧೀಯುಗದಲ್ಲಿ ಭಾರತದಲ್ಲಿ ರೂಢಿಗೆ ಬಂದ ಎಲ್ಲ ರೀತಿಗಳೂ ತಿಲಕರ ಕಣ್ಣ ಮುಂದೆ ಹಾಯ್ದು ಹೋಗಿದ್ದವು. ಗಾಂಧೀ ಚಳವಳಿಗೆ ಮುಂದೆ ಕರ್ನಾಟಕದಲ್ಲಿ ನಾಯಕರಾಗಿ ನಿಲ್ಲಲು ಆ ಭಾಷಣ ಪ್ರೇರಣೆ ನೀಡಿತೆಂದು ತಮ್ಮ ಆತ್ಮಕಥೆಯಲ್ಲಿ ಗಂಗಾಧರರಾಯರು ಹೇಳಿಕೊಂಡಿದ್ದಾರೆ.

ದೇಶದಲ್ಲಿ ಇಂಥ ಪರಿಸ್ಥಿತಿ ಇತ್ತು. ಹಿಂದೂಸ್ತಾನಕ್ಕೆ ಗಾಂಧೀಜಿ ಮರಳಿ ಬಂದಾಗ ಕಾಂಗ್ರೆಸ್ ಜನತೆಯ ಸಂಸ್ಥೆ ಆಗುವ ದಾರಿಯಲ್ಲಿ ಇತ್ತು. ಸ್ವದೇಶಿ, ಬ್ರಿಟಿಷ್ ವಸ್ತದ ಬಹಿಷ್ಕಾರ ಸಂದೇಶ ಜನತೆಗೆ ಮುಟ್ಟಿತ್ತು. 1907ರಲ್ಲೇ ತಿಲಕರ ಪ್ರೋತ್ಸಾಹದಿಂದ ಪಾನನಿರೋಧ ಚಳವಳಿ ಪ್ರಾರಂಭ ಆಗಿತ್ತು. ಪಿಕೆಟಿಂಗ್ ಆಗಿತ್ತು. ಕರ್ನಾಟಕದಲ್ಲೂ ಆಗ ಈ ಚಳವಳಿ ನಡೆಯಿತು. ಅದರಲ್ಲಿ ಭಾಗವಹಿಸಿದವರಲ್ಲಿ ದಿ. ಗೋವಿಂದರಾವ್ ಯಾಳಗಿಯವರು ಪಾಚ್ಛಾಪುರದ ಡಾ.ಜೋಶಿಯವರು ಮುಖ್ಯರು. ಅದುವರೆಗೆ ಎಲ್ಲರಿಗೂ ದಂಡ ತೆರುವ ಅವಕಾಶ ಇತ್ತು. ಇವರಿಬ್ಬರೂ ದಂಡವನ್ನು ತೆರಲಿಲ್ಲ. ಜೈಲಿಗೆ ಹೋದರು. ಈ ಬಗ್ಗೆ

"ಕೇಸರಿ'ಯಲ್ಲಿ ಒಂದು ಅಭಿನಂದನಾ ಲೇಖನ ಬಂತು. ತಿಲಕರು ಗಂಗಾಧರರಾಯರಿಗೆ ಒಂದು ಅಭಿನಂದನಾ ಪತ್ರ ಖಾಸಗಿಯಾಗಿ ಬರೆದರು.

1914ರಲ್ಲಿ ಗಾಂಧೀಜಿ ಭಾರತಕ್ಕೆ ಮರಳಿ ಬಂದರು. ಆ ವೇಳೆಗೆ ಅವರ ಕೀರ್ತಿ ಭಾರತದಲ್ಲಿ ಹಬ್ಬಿತ್ತು. ಜನ ಅವರಿಗೆ "ಕರ್ಮವೀರ' ಎಂದು ಹೆಸರು ಕೊಟ್ಟಿತ್ತು. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹದ ಚಳವಳಿಯಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಿದವರಲ್ಲಿ ದಕ್ಷಿಣ ಭಾರತೀಯರು ಹೆಚ್ಚಾಗಿ ಇದ್ದರು. ಸಹಜವಾಗಿಯೇ ದಕ್ಷಿಣ ಭಾರತದ ಮೇಲೆ ಗಾಂಧೀಜಿಗೆ ಅಭಿಮಾನ. ಗೋಪಾಲ ಕೃಷ್ಣ ಗೋಖಲೆ , ಗಾಂಧೀಜಿಗೆ ರಾಜಕೀಯದಲ್ಲಿ ಗುರುಗಳೆನಿಸಿದರು. ಅವರ ನೇತೃತ್ವದಲ್ಲಿ ಕೆಲಸ ಮಾಡಬೇಕು ಎಂದು ಗಾಂಧೀಜಿ ಮನಸ್ಸು ಮಾಡಿದ್ದರು. ಆದರೆ ಅದು ತಕ್ಷಣಕ್ಕೆ ಸಾಧ್ಯ ಆಗಲಿಲ್ಲ. ಗೋಖಲೆ ಅವರು ಗಾಂಧೀಜಿಗೆ ಒಂದು ಸೂಚನೆ ಕೊಟ್ಟಿದ್ದರು. ಒಂದು ವರ್ಷ ಕಾಲ ಇಡೀ ಭಾರತದ ಪ್ರವಾಸ ಮಾಡುತ್ತ ದೇಶದ ಪರಿಸ್ಥಿತಿಯನ್ನು ಅಭ್ಯಾಸ ಮಾಡಬೇಕು, ಆಮೇಲೆ ಸಾರ್ವಜನಿಕ ಕೆಲಸ ಮಾಡು ಎಂದು.

ಗಾಂಧೀಜಿ ಆತ್ಮಕತೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ' 1914 ಜುಲೈ 18ರಲ್ಲಿ ನಾನು ಹಿಂದೂಸ್ತಾನಕ್ಕೆ ಹೊರಟೆ. ಬಹಳ ವರ್ಷಗಳ ತರುವಾಯ ಮನೆಗೆ ಮರಳುತ್ತಿದ್ದೆ. ಗೊಖಲೆಯವರ ಮಾರ್ಗದರ್ಶನದಲ್ಲಿ ದೇಶಸೇವೆ ಮಾಡಲು ಕಾತರನಾಗಿದ್ದೆ.'

ಭಾರತ ಸೇವಕ ಸಂಘ

ಭಾರತ ಸೇವಕ ಸಂಘದ ಸದಸ್ಯರೂ (Servants of Indian Society) ಆಗಿದ್ದ ಗೋಖಲೆಯವರು ನನ್ನ ಮೇಲೆ ಪ್ರೀತಿ ತಳೆದರು. ನನ್ನನ್ನು ನೋಡಲು ಎಲ್ಲಾ ಸದಸ್ಯರನ್ನೂ ಕರೆಸಿದರು ಗೋಖಲೆ ಎಂದು ನನಗೆ ನೆನಪು. ಪ್ರತಿಯೊಂದು ಬಗೆಯ ವಿಷಯವನ್ನೂ ಬಿಚ್ಚು ಮನಸಿನಿಂದ ಅವರೊಡನೆ ಚರ್ಚಿಸಿದೆ. ನಾನು ಸಂಘಕ್ಕೆ ಸೇರಬೇಕೆಂದು ಅವರಿಗೆ ತುಂಬಾ ಇಷ್ಟ. ನನಗೂ ತುಂಬಾ ಇಷ್ಟ . ಆದರೆ ನನ್ನ ಆದರ್ಶಗಳಿಗೂ ಕಾರ್ಯಕ್ರಮಕ್ಕೂ ಅವರದಕ್ಕೂ ಬಹಳ ವ್ಯತ್ಯಾಸ ಇದ್ದುದರಿಂದ ನಾನು ಸಂಘಕ್ಕೆ ಸೇರುವುದು ಸರಿಯಲ್ಲ ಎಂದು ಸಂಘದ ಸದಸ್ಯರು ಅಭಿಪ್ರಾಯಪಟ್ಟರು.

"ನಾನು ಬರಬೇಕಾದರೆ ಫೀನಿಕ್ಸ್ ಪರಿವಾರವೂ ನನ್ನ ಜೊತೆಯಲ್ಲೇ ಬಂದಿತ್ತು. ಅವರ ಸಮೇತ ಗುಜರಾತಿನಲ್ಲಿ ಎಲ್ಲಾದರೂ ಒಂದು ಆಶ್ರಮ ಕಟ್ಟಿಕೊಂಡು ನೆಲೆಸಬೇಕು ಎಂದು ನನ್ನ ಮನಸ್ಸಿನಲ್ಲಿ ಆಸೆ ಇತ್ತು . ಗುಜರಾತಿನ ಸೇವೆಯ ಮೂಲಕ ದೇಶಸೇವೆ ಯೋಗ್ಯ ಎಂದು ನಾನು ಹೇಳಿದೆ. ನಾನು ಸದಸ್ಯ ಆಗಿ ಸೇರಲಿ ಬಿಡಲಿ ಗೋಖಲೆಯವರಿಗೆ ಈ ವಿಚಾರ ರುಚಿಸಿತು. "ಖಂಡಿತ ನೀನು ಹಾಗೆಯೇ ಮಾಡು, ನಿನ್ನ ಆಶ್ರಮದ ಯೋಗಕ್ಷೇಮದ ಹೊಣೆ ನನ್ನದು' ಎಂದರು. ■

ಕರಿಯರ ನಾಡಿನಲ್ಲಿ..

ಪ್ರೊ. ಎಸ್. ಜಿ. ಸಿದ್ದರಾಮಯ್ಯ

ಕರಿಯರ ನಾಡಿನಲ್ಲಿ
ಕಂದು ಬಣ್ಣದ ಕರಿಯ
ಪ್ರಥಮ ದರ್ಜೆ ಬೋಗಿಯಲ್ಲಿ
ಪಯಣಿಸಿದ ಹೊತ್ತು.

ವರ್ಣ ಶ್ರೇಷ್ಠತೆಯ ವ್ಯಸನಿಗಳು
ದುಷ್ಟಮನದ ಬಿಳಿಯರು
ಚಲಿಸುವ ರೈಲಿನಿಂದ
ದಬ್ಬಿದರು ಹೊರಗೆ

ನೆಲವೇ ಕುಸಿಯಿತು
ಬಿದ್ದ ರಭಸಕೆ
ಬಾಯಿ ತೆರೆಯಿತು
ಬಾನು ಬಾಂದಳ

ಹಿಂದೆಯೇ ಹೊರಗೆಸೆದ
ವಸ್ತುಗಳು
ಅಣಕಿಸಿದುವು
ಆತ್ಮಚರಿತೆಯನು

ಕನಿಕರಿಸಿದಳು ತಾಯಿ
ಓಡೋಡಿ ಬಂದು
ಬಿಳಿಯ ಮಾಯಿ
ಹಿಡಿದೆತ್ತಿದಳು .

ಬಿದ್ದ ಜಾಗದಲಿ
ಎದ್ದು ಕುಳಿತನು ಕರಿಯ
ನೋಡಿದನು ತಾಯಿಯನು
ನೆನಪಾದಳು ಪುತಲಿಬಾಯಿ

ಇದು ವರ್ಣದ್ವೇಷದ ನೆಲ
ಇಲ್ಲಿ ಕರಿಯರ ಬಲಕಿಲ್ಲ ಛಲ
ನೆಲ ತಮ್ಮದು ಜಲ ತಮ್ಮದು
ಛಲವಿಲ್ಲದಿರೆ ಯಾವುದು ಯಾರದು?

ಕರಿಯರೊಳಗೆ ಕರಿಯ ನಾನು
ಹಿರಿಯ ನಾಡಿನೊಳಗೆ ಕಿರಿಯ
ತಾಯಿನೆಲವ ತೊರೆದು ಬಂದೆ
ಇದು ಯಾರನೆಲ? ಇಲ್ಲಿ ಯಾರ ಬಲ?

ಕೂಳನರಸಿ ಬಂದವಗೆ
ಬಾಳು ನರಕವೆನಿಸಿದಾಗ
ಇರುವುದುಚಿತವೇನು ಇಲ್ಲಿ?
ಅರಿವು ಸತ್ತ ಮರೆವಿನಲ್ಲಿ?

ಹೋಗಬೇಕು ಊರಿಗೆ
ಬಾಳಸ್ವರ್ಗದೇರಿಗೆ
ಸ್ವಾಭಿಮಾನದೇರಿನಲ್ಲಿ
ನನ್ನದೆಂಬ ಹೆಮ್ಮೆಯಲ್ಲಿ.

ಎಚ್ಚೆತ್ತ ಮನದ ಭಾವಕೆ
ಜಲವನುಣಿಸಿ ಬಿಳಿಯ ತಾಯಿ
ಮಂದನಗುವಲಿ
ನೊಂದು ನುಡಿದಳು

ಯಾವ ದೇಶ? ಏನು ಕೆಲಸ?
ಕೂಲಿಕುಂಬಳ ಕಾಯಧರ್ಮ?
ಎದ್ದು ಕುಳಿತವನೆದೆಯ ತುಂಬಾ
ಯಾರ ನೆಲದಲಿ ಯಾರ ಹಕ್ಕು?

ಕರಿಯ ಬಿಳಿಯ ನೆಲದ ಸಿಕ್ಕು
ಸ್ವಾಭಿಮಾನವೆ ಬಲದ ಹಕ್ಕು
ಮರಳಿ ಹೋದರೆ ಊರಿಗೆ
ಹೇಡಿತನವದು ದಾರಿಗೆ

ಬಿದ್ದ ನೆಲದಲೆ ಎದ್ದು ನಿಂತ
ಧೂಳು ದುಸುಕನು ಕೊಡವಿ ಸಂತ
ಈ ನೆಲವೇ ನನ್ನ ಬಲವು
ನನ್ನ ಸತ್ಯಾಗ್ರಹದ ಜಲವು

ಸಮಾನತೆಯೇ ಸಹಜಧರ್ಮ
ಅಹಿಂಸೆಯದು ಪರಮೋಧರ್ಮ
ಇದುವೆ ಧರ್ಮ ಇದುವೆ ಕರ್ಮ
ಸಂಕಲ್ಪ ಶಿವನ ಬಾಳ ಮರ್ಮ

ನೊಂದ ನೆಲವು ಕುಡಿದ ಜಲವು
ದೀಕ್ಷೆ ಧರ್ಮಕೆ ಸಾಕ್ಷಿಯಾದುವು
ಹೋದ ರೈಲು ಹೊರಟೆ ಹೋಯಿತು
ಬಂದ ರೈಲು ಸಿಳ್ಳನೂದಿತು



ಕರ್ನಾಟಕದ ಗಾಂಧಿವಾದಿಗಳು



ಗೊರೂರು ರಾಮಸ್ವಾಮಿ ಅಯ್ಯಂಗಾರ್

ಡಾ.ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕನ್ನಡದ ಮಹಾನ್ ಸಾಹಿತಿ, ಅಪ್ರತಿಮ ಗಾಂಧೀವಾದಿ, ಸ್ವಾತಂತ್ರ್ಯಹೋರಾಟಗಾರ, ಅಸಮಾನತೆಗಳ ವಿರುದ್ಧ ಹೋರಾಡಿದ ಸಮಾಜ ಸೇವಕ ಮತ್ತು ಕರ್ನಾಟಕ ಏಕೀಕರಣಕ್ಕೆ ದುಡಿದವರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ 1904ರ ಜುಲೈ 4ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಶ್ರೀನಿವಾಸ ಅಯ್ಯಂಗಾರ್. ತಾಯಿ ಲಕ್ಷ್ಮಮ್ಮ. ತಮ್ಮ ಹಳ್ಳಿಯಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನು ಮುಗಿಸಿದ ಗೊರೂರರು ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿಯ ಅಸಹಕಾರ ಚಳುವಳಿಯಿಂದ ಆಕರ್ಷಿತರಾಗಿ ಶಿಕ್ಷಣಕ್ಕೆ ವಿದಾಯ ಹೇಳಿದರು. ಅನಂತರ ಅವರು ಗಾಂಧೀಜಿಯ ಆಶ್ರಮವನ್ನು ಸೇರಿ, ಗುಜರಾತಿನ ವಿದ್ಯಾಪೀಠದ ವಿದ್ಯಾರ್ಥಿಯಾದರು. ಬಳಿಕ ಮದ್ರಾಸಿನ 'ಲೋಕಮಿತ್ರ' ಮತ್ತು 'ಭಾರತಿ' ಪತ್ರಿಕೆಗಳ ಕನ್ನಡ ಸಮಾಚಾರ ಲೇಖಕರಾಗಿ ಸ್ವಲ್ಪಕಾಲ ಕೆಲಸಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಹರಿಜನೋದ್ಧಾರ ಅದರ ಮುಖ್ಯ ಕಾರ್ಯವಾಗಿತ್ತು. ಅದನ್ನು ಗೊರೂರರು ಶ್ರದ್ಧೆಯಿಂದ ನಿರ್ವಹಿಸಿದರು. ಆಮೇಲೆ ಬೆಂಗಳೂರಿನ ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಸಂಚಾಲಕರಾದರು. ಅಲ್ಲಿಯೇ ಅವರ ಸಾಹಿತ್ಯ ಸೇವೆ ಮೊದಲಾಯಿತು.

1933ರಲ್ಲಿ ಗೊರೂರರು ತಮ್ಮ ಗ್ರಾಮಕ್ಕೆ ಮರಳಿ, ಮೈಸೂರು ಗ್ರಾಮ ಸೇವಾಸಂಘವನ್ನು ಸ್ಥಾಪಿಸಿ, ಖಾದಿ ಪ್ರಚಾರ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. 1942ರ 'ಚಲೇ ಜಾವ್' ಚಳವಳಿಯಲ್ಲಿ ಅವರು ಭಾಗವಹಿಸಿ, ತುರಂಗವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಮೈಸೂರಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆಗಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದರು. ಅದು ಸ್ಥಾಪಿತವಾದ ಮೇಲೆ ಸುಮಾರು ಹನ್ನೆರಡು ವರ್ಷ ಕಾಲ ರಾಜ್ಯದ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಅವರು ದುಡಿದರು.

ಗೊರೂರರು ಅನೇಕ ಗೌರವಗಳನ್ನು, ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ 1974ರಲ್ಲಿ ಗೌರವ ಡಿ.ಲಿಟ್ ಪದವಿಯನ್ನು ನೀಡಿತು. ಅವರು 1982ರಲ್ಲಿ ಸಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರ 'ಅಮೆರಿಕದಲ್ಲಿ ಗೊರೂರು' ಗ್ರಂಥಕ್ಕೆ 1980ರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿತು.

ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಾಹಿತ್ಯ ಸೃಷ್ಟಿ ಸಮೃದ್ಧವಾದುದು. ಪ್ರಬಂಧ, ಕಥೆ, ಕಾದಂಬರಿ, ಪ್ರವಾಸ ಕಥನ, ವಿಮರ್ಶೆ, ಜೀವನ ಚಿತ್ರ, ಭಾಷಾಂತರ – ಹೀಗೆ ಅನೇಕ ಪ್ರಕಾರಗಳಿಗೆ ಅವರ ಕೊಡುಗೆ ಸಂದಿದೆ. ಆದರೂ ಗೊರೂರರ ಸಿದ್ಧಿ, ಪ್ರಸಿದ್ಧಿಗಳಿಗೆ ಮುಖ್ಯವಾದ ಆಧಾರ, ಅವರ ಪ್ರಬಂಧಗಳು. ಅವು ಹಲವು ದಶಕಗಳಿಂದ ಕನ್ನಡಿಗರಿಗೆ ಶುದ್ಧ ಸಂತೋಷವನ್ನೀಯುತ್ತಿವೆ. ಇಂದಿಗೂ ಅವುಗಳ ಸ್ವಾರಸ್ಯ ಬತ್ತಿಲ್ಲ. ತಮ್ಮ ಪ್ರಬಂಧ ಸಾಹಿತ್ಯದಿಂದ ನಾಡನ್ನು ನಗಿಸಿ ನಲಿಸಿದ್ದಾರೆ ಗೊರೂರರು. ಹಾಗೆ ನೋಡಿದರೆ ನಮ್ಮ ಜನತೆಗೆ ನಗೆಯನ್ನು ಕಲಿಸಿದವರಲ್ಲಿ ಅವರು ಪ್ರಮುಖರು ಎನ್ನಬಹುದು.

ಗೊರೂರು ಗ್ರಾಮ, ಹೇಮಾವತಿ ನದಿ– ಈ ಎರಡೂ ಗೊರೂರರ ಸಾಹಿತ್ಯದಿಂದ ಅಮರವಾದವು. 'ಹೇಮಾವತಿ', ಆ ಸಾಹಿತ್ಯ ಸಮಸ್ತಕ್ಕೂ ಸ್ಫೂರ್ತಿ. ಹೀಗೆ ಒಂದು ಊರಿನೊಡನೆ, ನದಿಯೊಡನೆ ಅಭಿನ್ನತೆ ಸಾಧಿಸಿದ ಲೇಖಕರು ವಿರಳವೇ. ಇದರಿಂದ ಗೊರೂರರ ವಾಙ್ಮಯಕ್ಕೆ ಪ್ರಾದೇಶಿಕ ಸ್ವರೂಪ ಪ್ರಾಪ್ತವಾಗಿದ್ದರೂ ಅವರು ಕೊಡುವ ಜೀವನ ಚಿತ್ರಣ ಪ್ರಾದೇಶಿಕವಾಗಿರುವಂತೆ ಪ್ರಾತಿನಿಧಿಕವೂ ಆಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ.

ಗಾಂಧೀವಾದಿ ಗೊರೂರರ ಜಾನಪದ ಪ್ರಜ್ಞೆ ಅದ್ಭುತವಾದುದು. ಅವರು ಹೇಳುತ್ತಾರೆ: "ನಾನು ಸಾಹಿತಿಗಿಂತ ಹೆಚ್ಚಾಗಿ ಜನಸಾಮಾನ್ಯರ ಮನುಷ್ಯ", ಇದು ಅವರ ನಂಬಿಕೆ: "ಜಾನಪದ ಗುಣಗಳನ್ನೂ, ಶಕ್ತಿಯನ್ನೂ ಹೆಚ್ಚು ಹೆಚ್ಚು ನೋಡಿದಂತೆ, ಭಾರತವನ್ನು ಆಧುನಿಕ ನಾಗರೀಕತೆಯ ಸರ್ವನಾಶದಿಂದ ತಪ್ಪಿಸಬಲ್ಲಂತದ್ದು ಜಾನಪದವೊಂದೆ ಎಂಬ ನಂಬಿಕೆ ದೃಢವಾಗುತ್ತದೆ". ಈ ಜಾನಪದ ಮತ್ತು ಜನಪರ ದೃಷ್ಟಿಯ ಹಿನ್ನೆಲೆಯಲ್ಲಿ ಗೊರೂರರ ಹಾಸ್ಯಪ್ರಜ್ಞೆ ಯಶಸ್ವಿಯಾಗಿ ಕೆಲಸ ಮಾಡಿದೆ.

ಗೊರೂರರ ಬರವಣಿಗೆಯಲ್ಲಿ ಕಲೆಯ ಪ್ರಯತ್ನ ಕಾಣುವುದಿಲ್ಲ. ಯಾವುದೇ ತಂತ್ರದ ಪ್ರಯೋಗವಾಗಲಿ, ಸಂಕೇತ ಪ್ರತೀಕ ಪ್ರತಿಮೆಗಳ ನಿರ್ಮಾಣವಾಗಲಿ ಅವರ ಕೃತಿಗಳಲ್ಲಿ ಗೋಚರಿಸುವುದಿಲ್ಲ.

ತಾವು ಕಂಡುಂಡದನ್ನು ಗೊರೂರರು ಸಹಜವಾಗಿ, ಸಲೀಸಾಗಿ ಆಕರ್ಷಕವಾಗಿ ಹೇಳಿಕೊಂಡು ಹೋಗುತ್ತಾರೆ.

ಗೊರೂರರ ಪ್ರಬಂಧಗಳನ್ನು ಮೊದಲು ಲಕ್ಷಿಸಬಹುದು. 'ಹಳ್ಳಿಯ ಚಿತ್ರಗಳು', 'ಗರುಡಗಂಬದ ದಾಸಯ್ಯ', 'ನಮ್ಮ ಊರಿನ ರಸಿಕರು', 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು', 'ಕಥೆಗಳು ಮತ್ತು ವಿನೋದ ಚಿತ್ರಗಳು', 'ಬೆಸ್ತರ ಕರಿಯ', 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' – ಈ ಸಂಕಲನಗಳಲ್ಲಿನ ಗೊರೂರರ ಪ್ರಬಂಧಗಳಲ್ಲಿ ಕಥಾಂಶ ದಟ್ಟವಾಗಿ ಸೇರಿಕೊಂಡಿವೆ. ಆದ್ದರಿಂದ ಗೊರೂರರ ಪ್ರಬಂಧಗಳು, 'ಪ್ರಬಂಧ' ಎಂಬ ಶಬ್ದದ ಸೀಮಿತ ಅರ್ಥಕ್ಕಿಂತ ಹೆಚ್ಚಿನ ವ್ಯಾಪ್ತಿಯುಳ್ಳದ್ದು ಎಂಬುದು ಗಮನಾರ್ಹ.

ಗೊರೂರರು ತಮ್ಮ ಬರಹಗಳಲ್ಲಿ ಈಗ ಕಾಣಸಿಗದ ಅಥವಾ ತ್ವರಿತವಾಗಿ ಮರೆಯಾಗುತ್ತಿರುವ ಹಳ್ಳಿಯ ಬದುಕನ್ನು ಅದರ ಎಲ್ಲ ಮುಖಗಳೊಡನೆ ಚಿತ್ರಿಸುವಲ್ಲಿ ಸಫಲರಾಗಿದ್ದಾರೆ. ಗ್ರಾಮೀಣ ಜೀವನದಲ್ಲಿ ಅವರು ಒಂದಾಗಿ ಬಾಳಿದ್ದರಿಂದ ಇದು ಸಾಧ್ಯವಾಗಿದೆ. ಅವರ ಕೃತಿಗಳಲ್ಲಿ ಕಂಡುಬರುವ ಪಾತ್ರ ವೈವಿಧ್ಯ ಅಪಾರವಾದುದು; ಅಲ್ಲಿ ಗ್ರಾಮದ ಎಲ್ಲ ವೃತ್ತಿಗಳ, ಎಲ್ಲ ಜಾತಿಗಳ ಜನರೂ ಇದ್ದಾರೆ ಹಾರುವರಿಂದ ಹರಿಜನರತನಕ. ('ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' ಎಂಬ ಪ್ರಬಂಧದಲ್ಲಿ ಪ್ರಾಣಿ ಪಾತ್ರವೂ ಉಂಟು.) ಆದರೆ ಜಾತಿ–ಮತ–ಭೇದಗಳನ್ನು ಮೀರಿ ಎಲ್ಲರನ್ನೂ ಒಗ್ಗೂಡಿಸುವ ಕೆಲವು ಸೂತ್ರಗಳನ್ನು ಗೊರೂರರು ಗುರುತಿಸಿ, ಅವುಗಳಿಗೆ ಒತ್ತುಕೊಡುವುದರ ಮೂಲಕ ಸಾಮರಸ್ಯಯುತವಾದ ಒಂದು ಸಮಷ್ಟಿಯ ಚಿತ್ರವನ್ನು ಮೂಡಿಸುತ್ತಾರೆ. ಅವರ ಲೆಕ್ಕಣಿ ಚಲನ ಛಾಯ ಬಿಂಬಗ್ರಾಹಿಯೂ ಆಗಿ, ಗ್ರಾಮಜೀವನದಲ್ಲಿ ಮಹತ್ವದ ಪಾತ್ರವಹಿಸುವ ಉತ್ಸವಗಳು, ಹಬ್ಬ ಹರಿದಿನಗಳು, ಜನಪದ ಕಲೆಗಳು, ಜನತೆಯಲ್ಲಿ ರೂಢವಾಗಿರುವ ಆಚಾರ ವಿಚಾರ, ನಂಬಿಕೆ ನಡಾವಳಿಗಳು ಎಲ್ಲವನ್ನೂ ಯಥಾವತ್ತಾಗಿ, ಸಜೀವವಾಗಿ ಸೆರೆಹಿಡಿದಿವೆ. ಗ್ರಾಮೀಣ ಸಂಸ್ಕೃತಿಯ ವಿಶ್ವರೂಪವನ್ನೇ ಅಲ್ಲಿ ಕಾಣಬಹುದು. "ಗೊರೂರರ ಕೃತಿಗಳು ಬರಬರುತ್ತ ಹಳ್ಳಿಗಳ ಮಹಾ ಭಾರತಗಳೇ ಆಗುತ್ತಿವೆ" ಎಂಬ ವಿ.ಕೃ. ಗೋಕಾಕರ ಮಾತೊಂದು ಉಲ್ಲೇಖನೀಯವಾಗಿದೆ.

ನಾಗರಿಕರು ಶುಷ್ಕವೆಂದು ಭಾವಿಸುವ ಜನಪದ ಜೀವನದಲ್ಲಿ ಎಂತಹ ಸ್ವಾರಸ್ಯವಿದೆ, ಚೆಲುವಿದೆ ಎಂಬುದನ್ನು, ಸಾಮಾನ್ಯ ಜನ ಎಂತಹ ರಸಿಕರೆಂಬುದನ್ನು ಗೊರೂರರು ತಮ್ಮ ಬರಹಗಳಲ್ಲಿ ಎತ್ತಿ ತೋರಿಸಿದ್ದಾರೆ. ದೈನಂದಿನ ಬದುಕಿನ ಸಾಮಾನ್ಯ ಘಟನೆಗಳಲ್ಲಿ ಮತ್ತು ಸಂಗತಿಗಳಲ್ಲಿ ಹುದುಗಿರುವ ವಿಶೇಷತೆಯನ್ನು ಬಣ್ಣಿಸಿದ್ದಾರೆ. ಅವರು ಎಲ್ಲವನ್ನೂ, ಎಲ್ಲರನ್ನೂ ಅವಲೋಕಿಸುವುದು ಹಾಸ್ಯ ಕಣ್ಣಿನಿಂದ.

ಗೊರೂರರ ಹಾಸ್ಯ ಹೇಗೆ ನಿರರ್ಗಳವೋ ಹಾಗೆ ನಿರ್ಮಲವೂ ಹೌದು. ಅದರ ಹಿಂದೆ ಆಕ್ರೋಶವಿಲ್ಲ, ಸಿನಿಕತನವಿಲ್ಲ' ಸಹಾನುಭೂತಿಯಿದೆ, ಮಾನವೀಯ ಅಂತಃಕರಣವಿದೆ. ಜೀವನವನ್ನೂ, ಜನವನ್ನೂ ಪ್ರೀತಿಸುವ ಪ್ರವೃತ್ತಿ ಗೊರೂರರರದು. ಆದರೆ ಎಲ್ಲ ವರ್ಗದ ಜನರಲ್ಲೂ ಮನೆ ಮಾಡಿಕೊಂಡಿರುವ ಲೋಪದೋಷಗಳನ್ನೂ, ಅವಗುಣಗಳನ್ನೂ ಅವರು ವಸ್ತುನಿಷ್ಠವಾಗಿ ನೋಡಿ, ಯಾರ ಮನಸ್ಸಿಗೂ ನೋವಾಗದಂತೆ ಹಾಸ್ಯ ವಿಡಂಬನೆಗೆ ಗುರಿಮಾಡಬಲ್ಲರು; ತನ್ಮೂಲಕ ಆ ಅಂಕುಡೊಂಕುಗಳ ತಿದ್ದುಪಡಿಗೆ ನೆರವಾಗಬಲ್ಲರು. ಗೊರೂರರ ಗೇಲಿಗೆ ಅವರ ಜಾತಿಯ ಜನ ಕೂಡ ಹೊರಗಲ್ಲ ಎಂಬುದು ಮಹತ್ವದ ಸಂಗತಿ. ಉದಾಹರಣೆಗೆ "ನಮ್ಮಲ್ಲಿ ಒಬ್ಬೊಬ್ಬರು ಒಂದೊಂದು ಕಸುಬನ್ನು ಆರಿಸಿಕೊಳ್ಳುವಂತೆ ಕೆಲವರು ಮಡಿಯನ್ನೇ ಕಸುಬಾಗಿ ಆರಿಸಿಕೊಂಡಿದ್ದಾರೆ" ಎಂಬ ಕರ್ಮಠ ವಿಡಂಬನವನ್ನು ಗಮನಿಸಬಹುದು. ನಾಮಧಾರಣ ಪ್ರಕರಣವನ್ನು ಕುರಿತು "ಇದು ಅಯ್ಯಂಗಾರಿಗಳಿಗೆ ಮೊಹರಂ" ಎಂಬ ಟೀಕೆ. ಅಷ್ಟೇಕೆ ಗೊರೂರರು ತಮ್ಮನ್ನು ತಾವೇ ಗೇಲಿಗೆ ಒಳಗುಮಾಡಿಕೊಳ್ಳಬಲ್ಲರು. "ನಾನು ಗರುಡಗಂಬವನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದುದನ್ನು ಜನರು ಕಂಡು, ಈ ಚಿತ್ರವನ್ನು ನೋಡಿ: 'ಇವನಿಗೆ ಜೋಳಿಗೆ, ಜಾಗಟೆ ಇಲ್ಲ. ಆದರೂ ಇವನೂ ದಾಸಯ್ಯನೇ ಸಂದೇಹವಿಲ್ಲ' ಎಂದು ಯೋಚಿಸಿದ್ದರು. ಈ ಬಗೆಯ ನಿರ್ಲಿಪ್ತತೆ ಎಲ್ಲರಲ್ಲೂ ಇರುವುದಿಲ್ಲ. 'ಆಚಾರ ಕೆಟ್ಟರೂ ಆಕಾರ ಕೆಡಬಾರದು', 'ಹಾರುವಯ್ಯ ಹಜಾಮನಾದುದು' ಮುಂತಾದ ಪ್ರಬಂಧಗಳು ಯಾರನ್ನೂ ಗಹಗಹಿಸುವಂತೆ ಮಾಡಬಲ್ಲುವು.

ಗೊರೂರರ ಹಾಸ್ಯಮನೋಧರ್ಮದ ವ್ಯಕ್ತಿತ್ವದಲ್ಲಿ ಬಾಳಿನ ಬಗೆಗೆ ಉತ್ಸಾಹವಿದೆ, ನಿಷ್ಠೆಯಿದೆ; ಅವರ ಬರಹಗಳು ಈ ಗುಣಗಳನ್ನು ಓದುಗರಲ್ಲೂ ಪ್ರೇರಿಸುತ್ತವೆ. "ಬೈಲಹಳ್ಳಿ ಸರ್ವೆ'ಯ ಕಥೆಯಲ್ಲಿ, ಸರ್ವೆ ಮುಗಿದ ಮೇಲೆ ಊರಿಗೆ ಹೋದ ಮೋಜಿನಿದಾರರು ನಾಣಿಗೆ ಬರೆದ ಪತ್ರದಲ್ಲಿ ಕೊನೆಯಲ್ಲಿ ಹೀಗೆನ್ನುತ್ತಾರೆ: "ನನ್ನ ಇಷ್ಟು ವರ್ಷದ ಅನುಭವದಲ್ಲಿ ನೂರಾರು ಹಳ್ಳಿಗಳನ್ನು ನೋಡಿದ್ದೇನೆ, ಅಳೆದಿದ್ದೇನೆ. ಎಲ್ಲಾ ಕಡೆಯೂ ಒಂದೇ ಸಮ, ಒಂದೇ ಗೋಳು, ಒಂದೇ ದಾರಿದ್ರ್ಯ, ಒಂದೇ ಕೊಳಕು, ಅಜ್ಞಾನ, ಬೈಲಹಳ್ಳಿಯಲ್ಲೂ ಅದೇ ಅಜ್ಞಾನ, ಅದೇ ಗೋಳು. ಆದರೆ ನಿಮ್ಮ ಉತ್ಸಾಹದಿಂದ ಆ ಗೋಳು ತಲೆ ತಗ್ಗಿಸಿತು. ಅಳುವುದಕ್ಕೆ ಸಾವಿರ ಕಾರಣವಿದ್ದೂ ನಗುವುದಕ್ಕೆ ಒಂದು ಕಾರಣವಿದ್ದರೆ ಆ ಕಾರಣವನ್ನೇ ನೀವು ಬಲಪಡಿಸಿ ನಗುತ್ತಿದ್ದೀರಿ. ನೋವು ಗೋಳುಗಳ ಹಿಂದೆ ಹೊಂಚುಹಾಕುತ್ತಿರುವ ನಗೆಯನ್ನು ಹಿಡಿಯುವುದೇ ಜೀವನದ ತಿರುಳು. ಅದೇ ನಮ್ಮ ಮುಂದಲ ಉತ್ಸಾಹಕ್ಕೆ ಕಾರಣ." ಇದು ಗೊರೂರರ ನಿಲುವೂ ಹೌದು.

'ನಮ್ಮ ಊರಿನ ರಸಿಕರು' ಗೊರೂರರ ಪ್ರಬಂಧ ಸಮುದಾಯದಲ್ಲಿ ಒಂದು ವಿಶಿಷ್ಟ ಕೃತಿ. ಇದನ್ನು 'ಚಿತ್ರ ಕಾದಂಬರಿ' ಎಂದು ಕರೆಯಲಾಗಿದೆ. "ಈ ಕೃತಿಯಲ್ಲಿ ಬರುವ ವ್ಯಕ್ತಿಗಳು ಬಿಡಿಬಿಡಿಯಾಗಿ ಕಂಡರೂ ಅವರೆಲ್ಲರೂ ವಿಶಿಷ್ಟ ಜೀವನದ ಪರಸ್ಪರ ಸಂಬಂಧವುಳ್ಳ ಗ್ರಾಮ ಸಮಾಜದ ಅವಯವಗಳಾಗಿ" ಚಿತ್ರಿತರಾಗಿದ್ದಾರೆ. ಇದರಲ್ಲಿ ಬರುವ ಶಾಲು ಸಾಬಿಯ ಪಾತ್ರ ಮರೆಯಲಾಗದ್ದು.

'ಹೇಮಾವತಿಯ ತೀರದಲ್ಲಿ' ಗೊರೂರರ ಅತ್ಯುತ್ತಮ ಪ್ರಬಂಧಗಳಲ್ಲೊಂದು. ಇದು 'ರಮ್ಯ ಚಿತ್ರಗಳ ಒಂದು ಚಿತ್ರಶಾಲೆ'. ಅದರ ಪ್ರಾರಂಭವಿದು: "ಹೇಮಾವತಿ ನದಿಯು ನಮ್ಮೂರ ಉಸಿರು. ನದಿಯ ದಡದಲ್ಲಿ ನಿಂತುಕೊಂಡು ನೋಡಿದರೆ ನದಿ ನಮ್ಮೂರ ಬಳಿ ಇರುವಷ್ಟು ಸುಂದರವಾಗಿ, ಸೊಗಸಾಗಿ ಮತ್ತೆಲ್ಲೂ ಇಲ್ಲವೆಂದು ಯಾರಿಗಾದರೂ ತೋರುವುದು. ನರಸಿಂಹಸ್ವಾಮಿ ದೇವಸ್ಥಾನದ ಮುಂದುಗಡೆಯಿಂದ ಎಡಗಡೆಯೂ, ಬಲಗಡೆಯೂ ನೋಡಿದರೆ ನೂರಾರು



ತೋಪುಗಳ ಗೊಂಚಲುಗಳು ಕಣ್ಣಿಗೆ ವಿಶ್ರಾಂತಿಯನ್ನು ಕೊಡುವುವು. ನದಿಯ ಎರಡು ದಡಗಳಲ್ಲೂ ಮರದ ಕೊಂಬೆಗಳು ನದಿಯ ಮೇಲೆ ಬಾಗಿದ್ದು ನೀರನ್ನು ಮುತ್ತಿಡುತ್ತಾ ನದಿಯ ರೆಪ್ಪೆಗಳಂತೆ ಕಾಣುವುವು. ನದಿಯಿಂದ ಮೇಲೆ ಪಶ್ಚಿಮಕ್ಕೆ ಒಂದು ಮೈಲಿ ಹೋದರೆ ಈಶ್ವರನನ್ನು ತಪಸ್ಸಿಗೆ ಆಕರ್ಷಿಸುವಷ್ಟು ರಮಣೀಯವೂ, ಶಾಂತವೂ ಆದ ಸಂಗಮ ಮತ್ತು ತೋಪು. ಹೇಮಾವತೀ ನದಿಯು ನಮ್ಮ ಪ್ರಾಂತಕ್ಕೇ ಜೀವವನ್ನು ಕೊಡುವ ಜೀವನಾಡಿ. ಅದರ ಸ್ಪರ್ಶದಿಂದ ಪವಿತ್ರವೂ, ಚೆನ್ನೂ ಆದ ನಮ್ಮ ನಾಡು ದೇವಲೋಕದ ನಂದನವನಕ್ಕೆ ಎಣೆಯಾದುದು". "ಹೇಮಾವತಿಯ ಬಣ್ಣನೆ ಹೀಗೆಯೇ ಕಾವ್ಯಗಂಧಿಯಾಗಿ ಮುಂಬರಿಯುತ್ತದೆ; ಒಟ್ಟಿನಲ್ಲಿ ಪ್ರಬಂಧ ಒಂದು ನೀಳ ಭಾವಗೀತೆಯಾಗಿದೆ. ಗೊರೂರರು ಯಾವುದೇ ಒಂದು ಗ್ರಾಮೀಣ ಅಥವಾ ನಾಗರಿಕ ಪರಿಸರವನ್ನಾಗಲಿ ಒಳಗಣ್ಣಿಗೆ ಪರಿಸ್ಫುಟವಾಗುವಂತೆ ವರ್ಣಿಸಬಲ್ಲರು. ಆ ವರ್ಣನೆಗಳಲ್ಲಿ ಎಷ್ಟೋ ಕಡೆ ಅವರ ಕವಿಮನೋವೃತ್ತಿಯ ವಿಲಾಸ ಕಾಣಿಸುತ್ತದೆ. ಕನ್ಯಾಕುಮಾರಿಯ ಕಡಲು, ಬಿಂದಿಗಮ್ಮನ ಜಾತ್ರೆ, ಶಿವರಾತ್ರಿ ಇತ್ಯಾದಿಗಳ ವರ್ಣನೆಗಳು ಕಾವ್ಯ ಪ್ರತಿಭೆಯ ಸಮೀಚೀನ ನಿದರ್ಶನಗಳು.

ನಾಗರೀಕತೆಯ ಪ್ರಭಾವದಿಂದ ನಾವು ಅಮೂಲ್ಯವಾದುದನ್ನೆನ್ನೋ ಕಳೆದುಕೊಂಡೆವು ಎಂಬ ವಿಷಣ್ಣತೆ ಗೊರೂರರ ಪ್ರಬಂಧಗಳಲ್ಲಿ ವ್ಯಕ್ತವಾಗುತ್ತದೆ. ಎಂದರೆ ಹಳೆಯ ಅನಿಷ್ಟ ವ್ಯವಸ್ಥೆ ಯಥಾವತ್ತಾಗಿ ಉಳಿದು ಬರಬೇಕಿತ್ತು ಎಂಬುದು ಗೊರೂರರ ಅಭಿಪ್ರಾಯವಲ್ಲ. ವಾಸ್ತವವಾಗಿ ಅವರದು ಪ್ರಗತಿಪರ ಧೋರಣೆ; ಹಳತು–ಹೊಸತುಗಳ ಸಮನ್ವಯದಲ್ಲಿ ವಿಶ್ವಾಸವುಳ್ಳದ್ದು. ನಾಗರೀಕತೆ, ವಿಜ್ಞಾನಗಳು ಮನುಕುಲಕ್ಕೆ ಲಾಭದಾಯಕವಾಗಿದ್ದರೂ – ಜನಜೀವನದ ಶಾಂತಿ, ಸಮಾಧಾನ ಸೌಮನಸ್ಯಗಳನ್ನು ಅಳಿಸಿವೆ. ಕೆಲವು ಮೌಲ್ಯಗಳಿಗೆ ಮಾರಕವಾಗಿವೆ ಎಂಬುದನ್ನು ಯಾರೂ ಒಪ್ಪಬೇಕು. 'ಸೇತುವೆ' ಎಂಬ ಪ್ರಬಂಧದ ಅಂತ್ಯದಲ್ಲಿ ಗೊರೂರರು ತೆಗೆಯುವ ಉದ್ಗಾರ ಅರ್ಥವತ್ತಾಗಿದೆ: "ಅದರ (ನದಿಯ) ಮೇಲೆ ಬಿದ್ದ ಸೇತುವೆ ಅದಕ್ಕೂ ನಮಗೂ ನಡುವೆ ಬಿದ್ದಂತೆ ತೋರುತ್ತಿದೆ". 'ನಮ್ಮ ಹೊಳೆಯ ಒಂದು ಅನುಭವ'ದ ಕಡೆಯಲ್ಲಿ ಬರುವ "ಈಗ ಹನುಮನು ಇಲ್ಲ' ಸೇತುವೆ ಇದೆ ಎಂಬ ಮಾತು ಕೂಡಾ ಧ್ವನಿಪೂರ್ಣ. ಹನುಮ ಬಹಳಷ್ಟನ್ನು ಸಂಕೇತಿಸುತ್ತಾನೆ. ಗೊರೂರರ ಕೃತಿಗಳನ್ನು ಓದಿದ ಮೇಲೆ, ವಾಚಕರಲ್ಲೂ ಒಂದು ನಷ್ಟದ ಭಾವನೆ ಹುಟ್ಟದಿರುವುದಿಲ್ಲ.

'ಗರುಡಗಂಬದ ದಾಸಯ್ಯ' ಕೃತಿಯ ಮುನ್ನುಡಿಯಲ್ಲಿ ದ.ರಾ ಬೇಂದ್ರೆ ಹೀಗೆಂದಿದ್ದಾರೆ. "ಒಬ್ಬ ಅರಸುಗಳೆ, ಹಜಾಮರೆ, ಹಾರುವರೆ, ತುರುಕರೆ, ದಾಸಯ್ಯಗಳೆ, ಬಯಲಾಟದವರೆ, ಸುಭೇಧಾರರೆ, ಶಾನುಭೋಗರೆ, ಹೊಲೆಯರೆ – ಇವರೆಲ್ಲರನ್ನೂ ಒಂದು ಮಾಲೆಯಲ್ಲಿ ಪೋಣಿಸಿದ ವಿಕಟ ಕವಿತ್ವವು ಪ್ರಶಂಸನೀಯವಾದುದೆಂದು ಯಾರು ಹೇಳಲಿಕ್ಕಿಲ್ಲ?" ವರಕವಿಗಳ ಈ ಮಾತು ಗೊರೂರರ ಸಾಹಿತ್ಯಕ್ಕೆಲ್ಲಾ ಅನ್ವಯಿಸಬಹುದಾದ ಹೇಳಿಕೆಯಂತಿದೆ.

ಗೊರೂರರ ಕಾದಂಬರಿಗಳು ನಾಲ್ಕು: 'ಹೇಮಾವತಿ', 'ಪುನರ್ಜನ್ಮ', 'ಮೆರವಣಿಗೆ' ಮತ್ತು 'ಊರ್ವಶಿ'. ನಾಲ್ಕೂ ಒಳ್ಳೆಯ ಕಾದಂಬರಿಗಳೇ. ಸಂಪ್ರದಾಯ ಶರಣರಾದ ಗ್ರಾಮೀಣ ಸಮಾಜದಲ್ಲಿ ಸುಧಾರಣೆಯ ಗಾಳಿ ಬೀಸಿದ ಪರಿಯನ್ನು ಚಿತ್ರಿಸುತ್ತದೆ 'ಹೇಮಾವತಿ'. ನೂತನ ವಿಚಾರಗಳಿಗೆ ಮನತೆರೆದ ಯುವಕರು ಹಳ್ಳಿಯಲ್ಲಿ ಹೇಗೆ ಹೊಸ ವಾತಾವರಣವನ್ನು ಸೃಜಿಸಿದರು ಎಂಬುದನ್ನು ಹೇಳುತ್ತದೆ. ಪಂಚಮರನ್ನು ಉದ್ಧರಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಗೊರೂರರು ಇದರಲ್ಲಿ ಎತ್ತಿ, ಉತ್ತರವನ್ನೂ ಕೊಟ್ಟಿದ್ದಾರೆ. ಅವರನ್ನು ಪ್ರೀತಿ, ಅನುಕಂಪಗಳಿಂದ ಕಾಣಬೇಕು, ಅವರಿಗೆ ಶಿಕ್ಷಣ ಕೊಡಬೇಕು, ಆರೋಗ್ಯ ನಿಯಮಗಳನ್ನು ಹೇಳಿಕೊಡಬೇಕು. ಈ ಪರಿವರ್ತನೆ ಒಂದೆರಡು ದಿನಗಳಲ್ಲಿ ಆಗುವಂಥದ್ದಲ್ಲ; ಎಲ್ಲರ ಮನವೊಲಿಸಿ, ನಿಧಾನವಾಗಿ ಸಾಧಿಸಬೇಕಾದದ್ದು.

'ಪುನರ್ಜನ್ಮ' ಸ್ವಾತಂತ್ರ್ಯ ಸಂಗ್ರಾಮ ಕಾಲದ ಒಂದು ಆದರ್ಶಪೂರ್ಣ

ಕತೆಯನ್ನು ಭಿತ್ತರಿಸುತ್ತದೆ. ನಮ್ಮ ಸ್ವಾತಂತ್ರ್ಯ ಎಂಥಹ ತಪಸ್ಸಿನ ಮತ್ತು ಶ್ರಮದ ಫಲ ಎಂಬುದನ್ನು ಮನಗಾಣಿಸುವ ಕಾದಂಬರಿ.

'ಮೆರವಣಿಗೆ' ಒಬ್ಬ ವಿಮರ್ಶಕರ ಪ್ರಕಾರ "ಇದು ಕತೆಯಲ್ಲ, ಕಾದಂಬರಿಯಲ್ಲ, ಪ್ರಬಂಧವೂ ಅಲ್ಲ, ಸಾಚಾ ಅನುಭವಗಳ ಮೆರವಣಿಗೆ". ಇದರಲ್ಲಿ ಈಗಿನ ಮಠಾಧಿಪತಿಗಳ ಮೇಲೆ ಗೊರೂರರು ಮಾಡಿರುವ ಆಕ್ರಮಣ ಅವಶ್ಯವಾಗಿ ಗಮನಿಸಬೇಕಾದುದು: "ಕಾಲಾನುಕಾಲಕ್ಕೆ ಧರ್ಮವನ್ನೂ ಮತಪದ್ಧತಿಗಳನ್ನೂ ಬದಲಾಯಿಸಿ, ಸಮಾಜವನ್ನು ಆಧುನಿಕವಾಗಿ ಮಾಡುತ್ತಿದ್ದ ಆ ಪೂರ್ವದ ಋಷಿಗಳೆಲ್ಲಿ? ಈಗಿನ ಈ ಮಠಾಧಿಪತಿಗಳಾದರೂ ಏನು ಮಾಡುತ್ತಿದ್ದಾರೆ; ಸಂಸಾರಿಕರಂತೆ ತಾವೂ ಅರಮನೆಗಳ ಮುಂದೆಯೂ ಅಧಿಕಾರಿಗಳ ಮುಂದೆಯೂ ಬಾಲ ಬಡಿಯುತ್ತಾ ಶಿಷ್ಯರೆನಿಸಿಕೊಳ್ಳುವ ಕುರಿಗಳ ತಲೆ ಒಡೆದು ಒಂದೊಂದು ಆಳು ಎತ್ತರದ ಕೊಳಗದಪ್ಪಲೆಗಳಲ್ಲಿ ಪಾಯಸ ಜಿಲೇಬಿ ಮಾಡಿಸಿ ಮೋಟಾರಿನಲ್ಲಿ ತಿರುಗುತ್ತಾ ತಮ್ಮ ಮೆರವಣಿಗೆಗಳನ್ನು ಮಾಡಿಕೊಳ್ಳುವ ಈ ಮಠದ ಪಾಳಯಗಾರರು, ಆಧುನಿಕ ಜಗತ್ತಿನ ಬದಲಾಯಿಸಿದ ಪರಿಸ್ಥಿತಿಗಳು ಎದುರಿಗೆ ಎದ್ದು ನಿಂತಾಗ ಯಾವ ಹಳೆಯ ಓಲೆಗರಿಯ ಧೂಳನ್ನು ಕೊಡುವುತ್ತಿದ್ದಾರೆ?... ಈ ಸಮಾಜದ ಅಸ್ತಿತ್ವ ಉಳಿಯಬೇಕಾದರೆ ನಾವು ಅವಲಂಬಿಸಬೇಕಾದ ಆಧುನಿಕ ಮಾರ್ಗಗಳಾವುವು? ತ್ಯಜಿಸಬೇಕಾದ ಪ್ರಾಚೀನ ರೋಗಗಳಾವುವು? ಧರ್ಮವನ್ನೂ ವಿಜ್ಞಾನವನ್ನೂ ಬೆರೆಸುವುದು ಹೇಗೆ? ಇವುಗಳನ್ನೆಲ್ಲಾ ಈ ಗುರುಗಳು ಎನಿಸಿಕೊಳ್ಳುವವರು ತಮ್ಮ ಮಠಗಳನ್ನೇ ಪ್ರಯೋಗ ಕ್ಷೇತ್ರಗಳನ್ನಾಗಿ ಮಾಡಿಕೊಂಡು ತೋರಿಸಬೇಡವೆ? ಅದು ಬಿಟ್ಟು ಏನು ಬರಲಿ ಏನು ನಡೆಯಲಿ? ಯಾವ ಪ್ರಶ್ನೆ ಏಳಲಿ? ಎಲ್ಲದಕ್ಕೂ ಸಾವಿರ ವರುಷದ ಕೆಳಗೆ ಹೇಳಿದ ಬುಕ್ಕಿನಲ್ಲಿ ಏನಿದೆ ಅದಕ್ಕೆ ಸರಿಹೋಗುತ್ತದೆಯೋ, ಅದಕ್ಕೆ ಸರಿ ಹೋಗದಿದ್ದರೆ ಅದಕ್ಕೆ ಜಗತ್ತಿನಲ್ಲಿ ಜಾಗವೇ ಇಲ್ಲ". ಇಲ್ಲಿ ಪ್ರಕಟವಾಗಿರುವ ವೈಚಾರಿಕ ಮನೋಭಾವ ಮತ್ತು ವಿವೇಕಪರತೆ ಸ್ತುತ್ಯವಾಗಿವೆ.

ಕೆಟ್ಟಗಳಿಗೆಯೊಂದರಲ್ಲಿ, ತನ್ನ ತಪ್ಪೇನೂ ಇಲ್ಲದೆ, ಜಾರಿದ ಹೆಣ್ಣೊಬ್ಬಳು ಮುಂದೆ ಎಚ್ಚತ್ತು ಆತ್ಮೋದ್ಧಾರ ಮಾಡಿಕೊಂಡು ಸಮಾಜಕ್ಕೂ ಸೇವೆ ಸಲ್ಲಿಸಿದ ಕರುಣಾಜನಕ ಕಥೆ 'ಊರ್ವಶಿ'ಯಲ್ಲಿದೆ. ಇದನ್ನು ಒಬ್ಬ ವಿಮರ್ಶಕರು ಕನ್ನಡದ 'ಪುನರುತ್ಥಾನ' ಎಂದು ಕರೆದಿದ್ದಾರೆ.

'ವೈಯಾರಿ', 'ಶಿವರಾತ್ರಿ', 'ಉಸಬು', 'ಗೋಪುರದ ಬಾಗಿಲು', 'ಕಮ್ಮಾರ ವೀರ ಭದ್ರಾಚಾರಿ', 'ಕನ್ಯಾಕುಮಾರಿ ಮತ್ತು ಇತರ ಕಥೆಗಳು', ಇವು ಗೊರೂರರ ಕಥಾ ಸಂಗ್ರಹಗಳು. ಹಳ್ಳಿಯ ಜೀವನ, ಪೇಟೆಯ ಜೀವನ ಎರಡಕ್ಕೂ ಸಂಬಂಧಿಸಿದ ಕತೆಗಳನ್ನು ಗೊರೂರರು ಬರೆದಿದ್ದಾರೆ. 'ಬೂತಯ್ಯನ ಮಗ ಅಯ್ಯು' ಗೊರೂರರ ಶ್ರೇಷ್ಠತಮ ಕಥೆ. ಸಂಕೀರ್ಣವಾದ ಅನುಭವವನ್ನು ತಾಳಿಕೊಂಡದ್ದು. ಅದರಲ್ಲಿ ಮನುಷ್ಯ ಸ್ವಭಾವವನ್ನು ಲೇಖಕರು ಸತ್ವಯುತವಾಗಿ ವಿಶ್ಲೇಷಿಸಿದ್ದಾರೆ. ದ್ವೇಷದ ನೆಲೆಯಲ್ಲಿ ಭೀಕರವಾಗಿ ಮೊದಲಾಗುವ ಕತೆ ಸ್ನೇಹದ ನೆಲೆಗೆ ಬೆಳೆದು ತಿಳಿಯಾಗಿ ಮುಗಿಯುತ್ತದೆ. "ಮುಗ್ಧತೆಗೆ ಸೆರೆಯಾಗದ ಆದರ್ಶತ್ವ, ಸರಳೀಕರಣಕ್ಕೇ ಸೆರೆಯಾಗದ ವಾಸ್ತವಿಕತೆ, ಅನುಕಂಪವನ್ನು ಬಿಡದ ತಿಳಿಹಾಸ್ಯ, ಮಾನವ ಸ್ವಭಾವದಲ್ಲಿ ನೈಜವಾದ ಮತ್ತು ಉದಾರವಾದ ಆಸಕ್ತಿ–ಇವು ಅವರ ಕಥಾಸಾಹಿತ್ಯಕ್ಕೇ ಜೀವವನ್ನೂ ಬೆಲೆಯನ್ನೂ ತಂದಿವೆ."

ಗೊರೂರರ ಪ್ರವಾಸ ಕಥನ, 'ಅಮೆರಿಕದಲ್ಲಿ ಗೊರೂರು' ಇದು ಅವರು ಮಾತ್ರ ಕೊಡಬಹುದಾದದ್ದು. ಅಮೆರಿಕವನ್ನು ಕುರಿತ ಪ್ರವಾಸ ಕಥನಗಳು ನಮ್ಮಲ್ಲಿ ಅನೇಕ ಇವೆ; ಗೊರೂರರದು ಅವುಗಳಂತಲ್ಲ. ಇಲ್ಲಿಯೂ ಅವರ ಹಾಸ್ಯಪ್ರಜ್ಞೆ ಮೇಲುಗೈಯಾಗಿದೆ. 'ಅಮೆರಿಕದಲ್ಲಿ ಗೊರೂರು' ಅತ್ಯಂತ ಧ್ವನಿಪೂರ್ಣವಾದ ಶೀರ್ಷಿಕೆ. ಅದು ಪೂರ್ವ ಪಶ್ಚಿಮಗಳನ್ನೂ ನಗರ ಗ್ರಾಮಗಳನ್ನೂ ಹಳತು ಹೊಸತನ್ನೂ ಸಂಕೇತಿಸುತ್ತದೆ. ಅಮೆರಿಕದಲ್ಲಿ ಗೊರೂರು ಕಳೆದು ಹೋಗುವುದಿಲ್ಲ; ವಿವಿಧ ಸ್ತರಗಳಲ್ಲಿ ಮೈದೋರುತ್ತದೆ. ಇದು ಈ ಪುಸ್ತಕದ ವಿಶೇಷ."

ಗೊರೂರರ ಸಾಹಿತ್ಯಕ್ಕೊಂದು ಗಂಭೀರವಾದ ಮುಖವೂ ಉಂಟೆಂಬುದನ್ನು ನೆನಪಿನಲ್ಲಿಡಬೇಕು. ಇದಕ್ಕೆ ಒಂದು ಸಣ್ಣ ನಿದರ್ಶನ ಕೊಡಬಹುದು. 'ನಮ್ಮ ಊರಿನ ರಸಿಕರು' ಕೃತಿಯಲ್ಲಿ ಒಂದೆಡೆ ವೈದಿಕ ಬಾಲ ವಿಧವೆಯೊಬ್ಬಳ ವಿಷಯ ಬರುತ್ತದೆ. ಅವಳಿಗೆ ಮನೆಯವರು ತಲೆ ಬೋಳಿಸಿ, ಕೆಂಪು ಸೀರೆ ಉಡಿಸಿ, ಮೂಲೆ ಗುಂಪು ಮಾಡಿದ ಹೀನ ಪ್ರಕ್ರಿಯೆಗೆ ಒಬ್ಬ ಶೂದ್ರ ಆಳಿನ ಪ್ರತಿಕ್ರಿಯೆಯಿದು: "ಅದ್ಯಾಕ ಬುದ್ಧಿ ಹನ್ನೊಂದು ವರ್ಷದ ಹಸುಗೂಸ್ಗೆ ಇನ್ನೊಂದು ಮದ್ವೆ ಮಾಡೋಕಾಗ್ದಿತ್ರ?" ಇದು ಗೊರೂರರ ನವೀನ ದೃಷ್ಟಿ ಮಾತ್ರವಲ್ಲದೆ, ಮೇಲುವರ್ಗದ ಸಂಪ್ರದಾಯ ಶಕಠತೆಗೂ ಕೆಳವರ್ಗದವರ ಮಾನವೀಯ ಧೋರಣೆಗೂ ಇರುವ ವೈರುಧ್ಯ ಕೂಡಾ ಇಲ್ಲಿ ಧ್ವನಿತವಾಗುತ್ತದೆ.

'ಸಾಹಿತ್ಯ ರಶ್ಮಿ' ಗೊರೂರರ ಆಲೋಚನಶೀಲತೆಗೆ ಸ್ಪಷ್ಟಸಾಕ್ಷಿಯಾಗಿದೆ. ಇದರಲ್ಲಿನ ಲೇಖನಗಳಲ್ಲಿ ಸಾಹಿತ್ಯ ಮಾತ್ರವಲ್ಲದೆ, ಶಿಲ್ಪಕಲೆ, ಶಿಕ್ಷಣ, ವೃತ್ತಪತ್ರಿಕೆ, ಜೀವನ ತತ್ವ ಮುಂತಾದ ಹಲವಾರು ವಿಷಯಗಳು ಚರ್ಚಿತವಾಗಿವೆ. ಗೊರೂರರ ಬಹುಮುಖದ ಅಭಿರುಚಿ, ಪಾಂಡಿತ್ಯ, ವಿಮರ್ಶನ ಶಕ್ತಿಗಳು ಇಲ್ಲಿ ಅನಾವರಣಗೊಂಡಿವೆ.

ಒಟ್ಟಿನಲ್ಲಿ ಕನ್ನಡಕ್ಕೆ ಗೊರೂರರ ಮುಖ್ಯವಾದ ಕೊಡುಗೆಯೇನು? ಅದನ್ನು ಕುವೆಂಪು ಅವರ ನುಡಿಗಳಲ್ಲಿ ಹೀಗೆ ಸಂಗ್ರಹಿಸಬಹುದು: "ಚಾರ್ಲ್ಸ್ ಡಿಕನ್ಸ್, ಆಲಿವರ್ ಗೋಲ್ಡ್ ಸ್ಮಿತ್, ಎ.ಜಿ. ಗಾರ್ಡಿನರ್ ಮುಂತಾದ ಇಂಗ್ಲಿಷ್ ಲೇಖಕರ ಬರವಣಿಗೆಯನ್ನು ಓದಿ, ಅಲ್ಲಿನ ವಿವಿಧ ರೀತಿಯ ಹಾಸ್ಯವನ್ನು ಚಪ್ಪರಿಸಿದ್ದ ನಮಗೆ ಕನ್ನಡದಲ್ಲಿ ಅಂಥ ಹಾಸ್ಯದ ಅರಕೆ ದೊಡ್ಡ ಕೊರಗನ್ನೇ ಉಂಟುಮಾಡಿತ್ತು. ಆ ಅರಕೆಯನ್ನು ಹೋಗಲಾಡಿಸಿದ ಕೆಲವೇ ಲೇಖಕರಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ನಿಶ್ಚಯವಾಗಿಯೂ ಅಗ್ರಸ್ಥಾನದಲ್ಲಿದ್ದಾರೆ..."

ಗೊರೂರರ ಬರವಣಿಗೆ ಅಪರೂಪದ್ದು ಮತ್ತು ಅವರಿಗೇ ಅನುರೂಪವಾದದ್ದು. ಗೊರೂರರು ಸೆಪ್ಟೆಂಬರ್ 28, 1991ರಲ್ಲಿ ನಿಧನರಾದರು. ಮತ್ತೊಬ್ಬ ಗೊರೂರರು ನಮ್ಮಲ್ಲಿಲ್ಲ; ಅವರು ಚಿತ್ರಿಸಿದಂಥ ಸಮಾಜವೂ ಈಗ ಉಳಿದಿಲ್ಲ. ಆದರೆ ಅವರು ಉಳಿಸಿ ಹೋಗಿರುವ ಅನುಭವ ಶ್ರೇಷ್ಠತೆ ನಮಗೆ ಆಸ್ತಿಯಾಗಿ ಉಳಿದಿದೆ. ಈ ಕನ್ನಡ ಶ್ರೇಷ್ಠರಿಗೆ ನಮ್ಮ ಗೌರವಪೂರ್ಣ ನಮನ.

(ಆಧಾರ: ಸಿ. ಪಿ. ಕೃಷ್ಣಕುಮಾರ್ ಅವರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕುರಿತ ಲೇಖನ)

https://youtu.be/s_IQVj_2rsw



ದಕ್ಷಿಣ ಪ್ರಾಂತೀಯ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗಳ ಸಮಾವೇಶ

1948ರ ಜನವರಿ 30 ರಂದು ಮಹಾತ್ಮ ಗಾಂಧೀಜಿಯವರ ಹತ್ಯೆಯಾದ ನಂತರ ಗಾಂಧಿ ವಿಚಾರ ಧಾರೆಗಳನ್ನು ಜೀವಂತವಾಗಿಡಲು ಹಾಗು ಅವರ ಆದರ್ಶದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಭಾರತದ ಎಲ್ಲ ರಾಜ್ಯಗಳಲ್ಲಿ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು . ಈ ಸಂಸ್ಥೆಗಳು ಈಗ ಕವಲು ದಾರಿಯಲ್ಲಿವೆ. ಹಲವು ರಾಜ್ಯಗಳಲ್ಲಿ ಈ ಸಂಸ್ಥೆಗಳು ಸ್ಥಳೀಯರ ಉತ್ತೇಜನವಿಲ್ಲದೆ ಸೊರಗಿವೆ. ಉತ್ತರದ ರಾಜ್ಯಗಳಿಗೆ ಹೋಲಿಸಿದರೆ ದಕ್ಷಿಣ ಪ್ರಾಂತ್ಯದ ರಾಜ್ಯಗಳಲ್ಲಿ ಇವು ಈಗಲೂ ಚಟುವಟಿಕೆಯಿಂದ ಕೂಡಿವೆ . ಇದನ್ನು ಇನ್ನಷ್ಟು ಚುರುಕುಗೊಳಿಸಲು ಕಳೆದ ಒಂದು ವರ್ಷದಿಂದ ದಕ್ಷಿಣ ರಾಜ್ಯಗಳ ಪ್ರಾಂತೀಯ ಸಮಾವೇಶವನ್ನು ನಡೆಸಲಾಗುತ್ತಿದೆ.




ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ ಹಾಗೂ ಉಪಾಧ್ಯಕ್ಷರಾದ ಜಿ.ಬಿ. ಶಿವರಾಜು ಅವರು ಮಾತನಾಡುತ್ತಿರುವುದು.

ಇಂಥ ಪ್ರಥಮ ಸಮಾವೇಶ ತೆಲಂಗಾಣ ರಾಜ್ಯದ ವತಿಯಿಂದ ಹೈದ್ರಾಬಾದಿನಲ್ಲಿ 2022 ರಲ್ಲಿ ನಡೆಯಿತು. ನಂತರ ಎರಡನೇ ಪ್ರಾಂತೀಯ ಸಮಾವೇಶ ಕಳೆದ ಮಾರ್ಚ್ 2023 ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಈಗ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗಳ ದಕ್ಷಿಣ ಪ್ರಾಂತ್ಯ ಸಮಾವೇಶ ಜೂನ್ 24 ಮತ್ತು 25 ರಂದು ಕೇರಳದ ರಾಜಧಾನಿ ತಿರುವನಂತಪುರದಲ್ಲಿ ನಡೆಯಿತು. ಸಮಾವೇಶದಿಂದ ಸಮಾವೇಶಕ್ಕೆ ಈ ಪ್ರಾಂತೀಯ ಚಟುವಟಿಕೆ ಉತ್ತಮಗೊಳ್ಳುತ್ತಿದ್ದು ದೇಶದಲ್ಲಿ ಗಾಂಧಿ ವಿಚಾರಧಾರೆಗಳನ್ನು ಜೀವಂತವಾಗಿಡಬೇಕು ಮತ್ತು ಯುವಜನರಿಗೆ ಇದನ್ನು ತಲುಪಿಸ ಬೇಕು ಎನ್ನುವ ಉತ್ಸಾಹ ದಕ್ಷಿಣ ರಾಜ್ಯಗಳಲ್ಲಿ ಮೂಡಿದೆ.

ನವದೆಹಲಿಯಲ್ಲಿರುವ ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ರಾಮಚಂದ್ರ ರಾಹಿ ಮತ್ತು ಕಾರ್ಯದರ್ಶಿ ಸಂಜಯ್ ಸಿಂಗ್ ತಿರುವನಂತಪುರ ಸಮಾವೇಶದಲ್ಲಿ ಭಾಗಿಯಾಗಿದ್ದರು. ಕೇರಳ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ಈ ಸಮಾವೇಶ ಅಚ್ಚುಕಟ್ಟಾಗಿ ಸಂಯೋಜನೆಗೊಂಡಿತ್ತು.ದಕ್ಷಿಣ ರಾಜ್ಯಗಳ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷರುಗಳು ಮತ್ತು ಸುಮಾರು 50 ಕ್ಕೂ ಹೆಚ್ಚು ಮಂದಿ ಗಾಂಧಿ ವಿಚಾರವಂತರು ಸಮಾವೇಶದಲ್ಲಿ ಭಾಗಿಯಾಗಿದ್ದರು.


ಸಮಾವೇಶದ ಉದ್ಘಾಟನೆಯ ದಿನ

ಸ್ವದೇಶೀ ಉತ್ಪನ್ನಗಳ ಪ್ರದರ್ಶನ ಮತ್ತು ಸಾವಯವ ತರಕಾರಿಗಳ ಮಾರುಕಟ್ಟೆಯನ್ನು ಆಯೋಜಿಸಲಾಗಿತ್ತು . ರಾಜ್ಯ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗಳ ಅಧ್ಯಕ್ಷರು ತಮ್ಮ ರಾಜ್ಯಗಳ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ಸಮಾವೇಶದಲ್ಲಿ ಪರಿಚಯ ಮಾಡಿಕೊಟ್ಟರು .

ಕರ್ನಾಟಕ ರಾಜ್ಯದಲ್ಲಿ ಗಾಂಧಿ ವಿಚಾರಧಾರೆಗಳನ್ನು ಯುವಜನರಿಗೆ ತಲುಪಿಸಲು ರಾಷ್ಟ್ರೀಯ ಸೇವಾ ಯೋಜನೆಯನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಿರುವ ಪ್ರಯೋಗದ ಬಗ್ಗೆ ವಿವರ ಮಂಡಿಸಲಾಯಿತು. ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ತಮಿಳುನಾಡು ಕೈಗೊಂಡಿರುವ ಪ್ರಯತ್ನಗಳ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು. ಭೂದಾನ ಮತ್ತು ಇತರ ಚಟುವಟಿಕೆಗಳ ಬಗ್ಗೆ ತೆಲಂಗಾಣ ರಾಜ್ಯದವರು ಮಾಹಿತಿ ಮಂಡಿಸಿದರು. ಕೇರಳ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯು 72 ವರ್ಷಗಳಲ್ಲಿ ನಡೆದು ಬಂದಿರುವ ಹಾದಿ ಮತ್ತು ಅದರ ಚಟುವಟಿಕೆಗಳ ಬಗ್ಗೆ ವಿವರಗಳ ಪುಸ್ತಕವನ್ನು ಸಭೆಯಲ್ಲಿ ವಿತರಿಸಿದರು.

ಎರಡನೇ ದಿನದ ಸಮಾವೇಶದಲ್ಲಿ , ಗಾಂಧೀಜಿ ಹತ್ಯೆಗೆ 75 ವರ್ಷಗಳು ತುಂಬುತ್ತಿರುವ ಈ ಸಂದರ್ಭದಲ್ಲಿ ಮುಂದೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಹಿರಿಯ ಗಾಂಧಿವಾದಿ ಡಾ . ಜಿ ರಾಮಚಂದ್ರನ್ ಅವರ ಸಮಾಧಿ ಸ್ಥಳ ಮತ್ತು ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಮಾಜಿ ಅಧ್ಯಕ್ಷರಾಗಿದ್ದ ಗೋಪಿನಾಥನ್ ನಾಯರ್ ಅವರ ಸಮಾಧಿ ಸ್ಥಳಕ್ಕೆ ಸಮಾವೇಶದ ಪ್ರತಿನಿಧಿಗಳು ಭೇಟಿ ನೀಡಿ ಗೌರವ ನಮನ ಸಲ್ಲಿಸಿದರು.

ಪ್ರಸ್ತುತ ದಿನಮಾನಗಳಲ್ಲಿ ಕೇಂದ್ರ ಸರ್ಕಾರವು ಗಾಂಧಿ ವಿಚಾರ ಸಂಸ್ಥೆಗಳ ವಿಷಯದಲ್ಲಿ ನಡೆದು ಕೊಳ್ಳುತ್ತಿರುವ ಆಕ್ರಮಣಕಾರಿ ಪ್ರವೃತ್ತಿಯ ಬಗ್ಗೆ ಸಮಾವೇಶದಲ್ಲಿ ಗಂಭೀರ ಚರ್ಚೆ ನಡೆಯಿತು. ಗಾಂಧಿ ರಾಷ್ಟ್ರೀಯ ಮ್ಯೂಸಿಯಂ ನಿರ್ದೇಶಕರಾದ ಹಾಗೂ ತಮಿಳುನಾಡು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ವಿ ಅಣ್ಣಾಮಲೈ ಅವರು ಗಾಂಧಿ ವಿಚಾರಗಳನ್ನು ಯುವಜನತೆಗೆ ತಲುಪಿಸುವ ಬಗ್ಗೆ ಗಂಭೀರ ಕಾರ್ಯಕ್ರಮಗಳನ್ನು ರೂಪಿಸುವ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಗಳು ನಡೆದು ಮಾರ್ಗಸೂಚಿಗಳನ್ನು ರಚಿಸಬೇಕು ಎಂದು ಸಮಾವೇಶದಲ್ಲಿ ಸಲಹೆ ನೀಡಿದರು. ■




ಗಾಂಧೀಜಿ ಮತ್ತು ಅವರ ಬಿಳಿಯ ಗೆಳೆಯ

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ವಕೀಲರಾಗಿ ಕೆಲಸ ಮಾಡುತ್ತಿರುವಾಗ ಕ್ಯಾಂಟೀನಿನಲ್ಲಿ ಸದಾ ಸಸ್ಯಾಹಾರವನ್ನು ಕೇಳಿ ಪಡೆಯುತ್ತಿದ್ದರು. ಇದನ್ನು ಅಚ್ಚರಿಯಿಂದ ಗಮನಿಸುತ್ತಿದ್ದ ಕಲೆನ್‌ಬ್ಯಾಕ್ ಎಂಬ ಜರ್ಮನ್ ಎಂಜಿನಿಯರ್ ಅವರ ಗೆಳೆಯರಾದರು. ಗಾಂಧೀಜಿಯವರ ಸರಳ ಬದುಕಿನ ವಿಧಾನ ಅತಿ ಶ್ರೀಮಂತರಾಗಿದ್ದ ಕಲೆನ್‌ಬ್ಯಾಕ್ ರನ್ನು ಸೆಳೆದದ್ದು ವಿಸ್ಮಯ! ಅವರೂ ಸರಳಜೀವನದ ಪ್ರತಿಪಾದಕರಾದರು. ಗಾಂಧೀಜಿಯವರು ಓದಿದ್ದ ಅನ್ ಟು ದ ಲಾಸ್ಟ್ ಪುಸ್ತಕವನ್ನು ಇಬ್ಬರೂ ಮತ್ತೆ ಓದಿ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡರು. ಅವುಗಳಲ್ಲಿ ಸಾಧ್ಯವಾದಷ್ಟನ್ನು ತಮ್ಮ ಜೀವನದಲ್ಲಿ ಅಳವಡಿಸತೊಡಗಿದರು. ಈ ಪ್ರಯೋಗದಲ್ಲಿ ಅವರು ಮೋಚಿಯೊಬ್ಬನಿಂದ ಚಪ್ಪಲಿ ಹೊಲಿಯಲು ಕಲಿತದ್ದೂ ಸೇರಿತ್ತು. ಆ ಕಾಲದಲ್ಲಿ ಚಾಲ್ತಿಯಲ್ಲಿಲ್ಲದ ತಮ್ಮ ಶೌಚಾಲಯವನ್ನು ತಾವೇ ಸ್ವಚ್ಛಗೊಳಿಸಿಕೊಳ್ಳುವ ನಿಯಮವನ್ನು ಪಾಲಿಸತೊಡಗಿದರು. ಸರಳತೆಯೇ ಅವರಿಬ್ಬರನ್ನು ಹತ್ತಿರ ತಂದಿತ್ತು.

ಕಲೆನ್‌ಬ್ಯಾಕ್ ಕೊಡುಗೆಯಾಗಿ ನೀಡಿದ ನೂರು ಎಕರೆ ಜಾಗದಲ್ಲಿ ಗಾಂಧೀಜಿ ಟಾಲ್ಸ್ಟಾಯ್ ಫಾರ್ಮ್ ಪ್ರಾರಂಭಿಸಿದರು. ಅವರ ಆಶ್ರಮ ಜೀವನದ ಪ್ರಯೋಗಗಳು ಇಲ್ಲಿಯೇ ಪ್ರಾರಂಭಗೊಂಡವು. 1915ರಲ್ಲಿ ಗಾಂಧೀಜಿಯವರು ಭಾರತಕ್ಕೆ ಬಂದಾಗ ಕಲೆನ್ ಬ್ಯಾಕ್ ಕೂಡ ಭಾರತಕ್ಕೆ ಬರಬೇಕೆಂದುಕೊಂಡರು, ಯಾಕೆಂದರೆ ಅವರು ಗಾಂಧೀಜಿಯವರ ಎಲ್ಲ ಕೆಲಸಗಳ ಒಡನಾಡಿಯಾಗಿದ್ದರು. ಆದರೆ ಅಷ್ಟರಲ್ಲೇ ಪ್ರಥಮ ವಿಶ್ವಯುದ್ಧ ಪ್ರಾರಂಭವಾದ್ದರಿಂದ ಬ್ರಿಟಿಷ್ ಸರಕಾರ ಜರ್ಮನ್ ಪ್ರಜೆಯಾದ ಅವರಿಗೆ ಪ್ರವೇಶ ನೀಡಲಿಲ್ಲ.

1936ರಲ್ಲಿ ಅವರು ಗಾಂಧೀಜಿಯವರ ವಾರ್ಧಾ ಆಶ್ರಮಕ್ಕೆ ಬಂದರು. ಆ ಸಮಯದಲ್ಲಿ ಅವರ ಆರೋಗ್ಯ ಕೆಟ್ಟಿತ್ತು. ಸ್ವತಃ ಗಾಂಧೀಜಿಯವರೇ ಅವರ ಶುಶ್ರೂಷೆ ಮಾಡಿದರು. ಎರಡನೇ ಮಹಾಯುದ್ಧ ಪ್ರಾರಂಭಗೊಂಡ ಹಿನ್ನೆಲೆಯಲ್ಲಿ ಅವರು ಮತ್ತೆ ಭಾರತದಿಂದ ಮರಳಬೇಕಾಯಿತು. ಆದರೆ ಗಾಂಧೀಯವರ ಹೋರಾಟದ ಅಸ್ತ್ರವಾದ ಸತ್ಯಾಗ್ರಹವನ್ನು ಅವರು ದಕ್ಷಿಣ ಆಫ್ರಿಕಾದಲ್ಲಿ ಸದಾ ಚಾಲ್ತಿಯಲ್ಲಿಟ್ಟರು. ಅನಾರೋಗ್ಯದ ಕಾಲದಲ್ಲಿಯೂ ಜೈಲುಪಾಲಾದರು. 1938ರಲ್ಲಿ ಅವರು ತೀರಿಕೊಂಡಾಗ ಗಾಂಧೀಜಿ ತಮ್ಮ ಸೋದರನೊಬ್ಬರನ್ನು ಕಳಕೊಂಡಂತೆ ನೊಂದುಕೊಂಡರು. ಯಾಕೆಂದರೆ ಗಾಂಧೀಜಿಯವರ ಮಕ್ಕಳಿಗೆಲ್ಲ ಅವರು ಪ್ರೀತಿಯ ಕಾಕಾ ಆಗಿದ್ದರು.

ಸಂಗ್ರಹ : ಸುಧಾ ಅಡುಕುಳ



ಗಾಂಧಿ ಚಿಂತನೆ 01

– ಜಗದೀಶ್ ಕೊಪ್ಪ

ಮಹಾತ್ಮ ಗಾಂಧೀಜಿ ಎಂದರೆ, ಕೇವಲ ಒಬ್ಬ ವ್ಯಕ್ತಿಯ ಹೆಸರು ಮಾತ್ರವಾಗಿರದೆ ಅದು ಇಪ್ಪತ್ತೇ ಶತಮಾನದ ಮನುಕುಲವನ್ನು ಇನ್ನಿಲ್ಲದಂತೆ ಕಾಡಿದ ಹಾಗೂ ಪ್ರೇರೇಪಿಸಿದ ಒಂದು ಅದಮ್ಯ ಚೇತನದ ಹೆಸರು ಕೂಡ ಆಗಿದೆ. ಇಂತಹ ಕಾರಣಕ್ಕಾಗಿ ಇಪ್ಪತ್ತೊಂದನೆಯ ಶತಮಾನದ ಮನುಕುಲವು ಮಹಾತ್ಮ ಗಾಂಧೀಜಿಯವರನ್ನು ಓರ್ವ ವ್ಯಕ್ತಿಯಾಗಿ ನೋಡುವುದರ ಬದಲು ಒಂದು ಪ್ರೇರಣಾ ಶಕ್ತಿಯಾಗಿ ನೋಡುತ್ತಿದೆ.

ಭಾರತದಂತಹ ಬಹುಮುಖಿ ಸಂಸ್ಕೃತಿಯ ನೆಲದಲ್ಲಿ ಬುದ್ಧ ಮತ್ತು ಬಸವಣ್ಣನವರ ನಂತರ ದಾರ್ಶನಿಕರ ಸ್ಥಾನಕ್ಕೇರಿದ ಈ ಮಹಾನ್ ಮಾನವತಾವಾದಿಯ ಚಿಂತನೆಗಳು ಮತ್ತು ಬದುಕು ಇಂದಿಗೂ ಸಹ ನಾವು ನಡೆಯುವ ಹಾದಿಗೆ ಕೈ ದೀವಿಗೆಯಾಗಿವೆ.

ತಮ್ಮ ಜೀವಿತಾವಧಿಯಲ್ಲಿ ನಡೆ ಮತ್ತು ನುಡಿಯ ನಡುವೆ ಕಿಂಚಿತ್ತೂ ಕಂದಕವಿಲ್ಲದಂತೆ ಬದುಕಿದ ಗಾಂಧೀಜಿಯವರು ನಿರಂತರ ತಮ್ಮ ಆತ್ಮಸಾಕ್ಷಿಯೆಂಬ ಪ್ರಜ್ಞೆಯ ಜೊತೆ ನಡೆಸಿದ ಅನುಸಂಧಾನದ ಮೂಲಕ ಒಬ್ಬ ಅಪ್ಪಟ ಮಾನವತಾವಾದಿಯಾಗಿ ಬದುಕುವ ದಾರಿಯನ್ನು ಕಂಡುಕೊಂಡರು. ಅಷ್ಟೇ ಅಲ್ಲದೆ ಅದನ್ನು ತಾವು ಬದುಕಿದ ವರ್ತಮಾನದ ಜಗತ್ತಿಗೆ ಬೆಳಕಿನ ದಾರಿಯಾಗಿ ಪರಿವರ್ತಿಸಿದರು.

ಈ ನೆಲದ ಮೇಲೆ ಮನುಷ್ಯನೆಂಬ ಜೀವಿ ತನ್ನ ನಾಗರೀಕತೆಯ ಕಾಲದಿಂದ ಹಿಂಸೆ, ಯುದ್ಧ, ದ್ವೇಷ, ಅಸೂಯೆಯಿಂದ ಬದುಕುತ್ತಿದ್ದ ಸಂದರ್ಭದಲ್ಲಿ ಅವುಗಳಿಗೆ ಪ್ರತಿಯಾಗಿ ಈ ಜಗತ್ತಿಗೆ ಸತ್ಯ ಮತ್ತು ಅಹಿಂಸೆ ಎಂಬ ಪರಿಕಲ್ಪನೆಗಳನ್ನು ನೀಡುವುದರ ಮೂಲಕ ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಎಲ್ಲರಿಗೂ ಮಾದರಿಯಾದರು.

ಗಾಂಧೀಜಿಯವರ ವ್ಯಕ್ತಿತ್ವದ ವಿಶೇಷವೆಂದರೆ, ಅವರೆಂದಿಗೂ ಪ್ರವಾದಿಗಳ ರೀತಿಯಲ್ಲಿ ಕೇವಲ ಉಪದೇಶಗಳಿಗೆ ಸೀಮಿತವಾಗಲಿಲ್ಲ. ಬುದ್ಧನಂತೆ, ಬಸವಣ್ಣನವರಂತೆ ಉದಾತ್ತ ಮೌಲ್ಯಗಳನ್ನು ತಮ್ಮ ಬದುಕಿಗೆ ಅಳವಡಿಸಿಕೊಂಡು, ತಾವು ಪ್ರತಿಪಾದಿಸಿದ ಸಿದ್ಧಾಂತಗಳನ್ನು ಪ್ರಯೋಗಗಳ ಮೂಲಕ ಆಚರಣೆಗೆ ತರುವುದರ ಮೂಲಕ ಅಂಧಕಾರದಲ್ಲಿದ್ದ ಜಗತ್ತಿನ ಕಣ್ಣು ತೆರೆಸಿದರು. ಈ ನೆಲದ ಮೇಲೆ ರಕ್ತ, ಮಾಂಸ, ಮಜ್ಜೆಯಿಂದ ಕೂಡಿ ಒಬ್ಬ ಮನುಷ್ಯ ಹೀಗೂ ಬದುಕಬಹುದೆ? ಎಂಬ ಅಚ್ಚರಿಯಿಂದ ಇಡೀ ಜಗತ್ತು ತಮ್ಮತ್ತ ತಿರುಗಿ ನೋಡುವಂತೆ ಮಾಡಿದರು.

ಮೌಲ್ಯಯುತವಾದ ಘನತೆಯ ಬದುಕು ಪ್ರತಿಯೊಬ್ಬ ಜೀವಿಗೂ ಅತ್ಯಾವಶ್ಯಕ ಎಂದು ಪ್ರತಿಪಾದಿಸಿದವರಲ್ಲಿ ಮಹಾತ್ಮ ಗಾಂಧೀಜಿ ಅಗ್ರಗಣ್ಯರು. ಮನುಷ್ಯನ ಬದುಕಿಗೆ ಪ್ರಜ್ಞಾಪೂರ್ವಕವಾಗಿ ನೈತಿಕತೆಯನ್ನ ಹಾಗೂ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಸಂಲಗ್ನಗೊಳಿಸಿದ ಅವರ ಚಿಂತನೆ ಯಾವೊತ್ತಿಗೂ ಅತ್ಯಂತ ಶ್ರೇಷ್ಠವಾದುದು.

1907 ರಲ್ಲಿ ಗಾಂಧೀಜಿಯವರು ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ಬರೆದ " ಯಾರು ಪ್ರಾಮಾಣಿಕರೋ, ಯಾರಲ್ಲಿ ಯಾವುದೇ ಬಗೆಯ ಹಗೆತನವಿಲ್ಲವೋ, ಯಾರು ಯಾವಾಗಲೂ ಶುದ್ಧ ಮನಸ್ಸಿನಿಂದ ತಮ್ಮ ಕ್ರಿಯೆಯಲ್ಲಿ ನಿರತರಾಗಿರುತ್ತಾರೋ, ಅವರೇ ಈ ಜಗತ್ತಿನ ನಿಜವಾದ ಸುಖಿಗಳು" ಎಂಬ ಮಾತುಗಳು ನಾವು ನಡೆಯಬೇಕಾದ ಸನ್ಮಾರ್ಗದ ಹಾದಿಯ ಕುರಿತಂತೆ ಮಾರ್ಗದರ್ಶನ ನೀಡುತ್ತವೆ.

ಒದ್ದೆಯಾದ ಬೆಂಕಿ ಕಡ್ಡಿಯೊಂದು ಒಣಗಿದ ಮರದ ಕಟ್ಟಿಗೆಯನ್ನು ಹೊತ್ತಿಸಲು ಹೇಗೆ ಸಾಧ್ಯವಿಲ್ಲವೋ, ಅದೇ ರೀತಿಯಲ್ಲಿ ನೀತಿಯನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳದ ವ್ಯಕ್ತಿ ಇನ್ನೊಬ್ಬನಿಗೆ ನೈತಿಕತೆಯನ್ನು ಬೋಧಿಸಲಾರ ಎಂಬುದು ಗಾಂಧೀಜಿಯವರ ನಿಲುವಾಗಿತ್ತು.

ಗಾಂಧೀಜಿಯವರ ಇಡೀ ಜೀವನದ ದೃಷ್ಟಿಕೋನ ಮನುಷ್ಯ ಕೇಂದ್ರಿತ ನೆಲೆಯಾಗಿತ್ತು. ಅವರು ತಮ್ಮ ಜೊತೆ ಬದುಕುತ್ತಿದ್ದ ಇತರೆ ಮನುಷ್ಯರು ಮಾತ್ರವಲ್ಲದೆ, ಈ ಜಗತ್ತಿನ ಸಕಲೆಂಟು ಜೀವರಾಶಿಗಳ ಕುರಿತಂತೆ ಅಪಾರ ಕಾಳಜಿಯುಳ್ಳವರಾಗಿದ್ದರು.


ಮನುಷ್ಯ ಜೀವಿಯ ಅಂತರಂಗದಲ್ಲಿ ಹುದುಗಿಕೊಂಡಿದ್ದ ದ್ವೇಷ, ಅಸೂಯೆ, ಚಂಚಲ ಬುದ್ಧಿ, ಸ್ವಾರ್ಥ, ದೌರ್ಬಲ್ಯಗಳು ಇವುಗಳನ್ನು ಮೆಟ್ಟಿ ನಿಲ್ಲುವುದರ ಕುರಿತು ಅವರು ಕಾಳಜಿ ವಹಿಸುತ್ತಿದ್ದರು. ಜೀವನವಿಡಿ ಇವುಗಳನ್ನು ತೊಡೆದು ಹಾಕಲು ಹೋರಾಟ ನಡೆಸಿದರು. ವ್ಯಯಕ್ತಿಕವಾಗಿ ಅವರು ಯಶಸ್ವಿಯಾದರು. ಆದರೆ, ಈ ವಿಷಯದಲ್ಲಿ ತಾವೊಬ್ಬ ಸಂತ ಎಂದು ಎಲ್ಲಿಯೂ ಹೇಳಿಕೊಳ್ಳಲಿಲ್ಲ. ಆದರೆ. ಸತ್ಯಾನ್ವೇಷಣೆಯಲ್ಲಿ ತೊಡಗಿರುವ ಓರ್ವ ಪಥಿಕ ಎಂದು ಹೇಳಿಕೊಂಡರು.

ಗಾಂಧೀಜಿಯವರ ವೈಯಕ್ತಿಕ ಜೀವನದಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಯಾವುದೇ ವ್ಯತ್ಯಸವಿಲ್ಲದೆ ತೆರೆದ ಪುಸ್ತಕದಂತೆ ಬದುಕಿದರು. ಜೊತೆಗೆ ತಮ್ಮ ಅನೇಕ ಶಿಷ್ಯರಿಗೆ ಮತ್ತು ಅನುಯಾಯಿಗಳಿಗೆ ಈ ರೀತಿಯ ಶಿಸ್ತು ಬದ್ಧ ಹಾಗೂ ಪ್ರಾಮಾಣಿಕವಾದ ಬದುಕನ್ನು ಬದುಕುವಂತೆ ಪ್ರೋತ್ಸಾಹಿಸಿದರು

ಅತ್ಯಂತ ಸರಳ ಹಾಗೂ ಮಿತವಾದ ಜೀವನ ಅವರ ಬದುಕಿನ ಮೂಲ ಮಂತ್ರವಾಗಿತ್ತು. ನಾವು ಈ ಜಗತ್ತಿನ ನೈಸರ್ಗಿಕ ಸಂಪತ್ತಿನ ಒಡೆಯರಲ್ಲ, ಕೇವಲ ವಾರಸುದಾರರು. ಅದನ್ನು ಮಿತವಾಗಿ ಬಳಸಿ, ಮತ್ತಷ್ಟು ಸಂವೃದ್ಧಿಗೊಳಿಸಿ ಮುಂದಿನ ತಲೆ ಮಾರಿಗೆ ನಾವು ದಾಟಿಸ ಬೇಕು. ಇದು ಈ ಜಗತ್ತಿನ ಪ್ರತಿಯೊಬ್ಬ ಮನುಷ್ಯನ ನೈತಿಕ ಕರ್ತವ್ಯ ಎಂದು ಪ್ರತಿ ಪಾದಿಸುತ್ತಿದ್ದರು.

ಇಂತಹ ಉದಾತ್ತ ಚಿಂತನೆಗಳು ಅವರನ್ನು ಮಹಾತ್ಮನ ಸ್ಥಾನಕ್ಕೇರಿಸಿದವು ಎಂದರೆ, ಅತಿಶಯದ ಮಾತಾಗಲಾರದು.

(ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರವಾದ ಗಾಂಧೀಜಿ ಕುರಿತ ಚಿಂತನೆಗಳು)



ಹಿಂದ್ ಸ್ವರಾಜ್

ಪುಸ್ತಕ ಪರಿಚಯ

'ನನ್ನ ಈ ಚಿಕ್ಕ ಪುಸ್ತಕ ಹೀಗೆ ಅನೇಕಾನೇಕರ ಕಣ್ಣಿಗೆ ಬಿದ್ದಿರುವುದು ನನ್ನ ಪುಣ್ಯ. ಮೂಲಗ್ರಂಥ ಗುಜರಾತಿಯಲ್ಲಿದೆ. ದಕ್ಷಿಣ ಆಫ್ರಿಕಾದ ಇಂಡಿಯನ್ ಒಪಿನಿಯನ್ ನಲ್ಲಿ ಮೊದಲು ಇದು ಪ್ರಕಟವಾಯಿತು. ಲಂಡನ್ ನಿಂದ ದಕ್ಷಿಣ ಆಫ್ರಿಕಾಕ್ಕೆ 1908 ರಲ್ಲಿ ಹಿಂದಿರುಗುತ್ತಿದ್ದಾಗ ಭಾರತೀಯ ಕ್ರಾಂತಿ ಕಾರಿಗಳಿಗೆ, ದಕ್ಷಿಣ ಆಫ್ರಿಕಾದಲ್ಲೂ ಅದೇ ಪಂಥಿಗಳಿಗೆ ಉತ್ತರವಾಗಿ ನಾನು ಇದನ್ನು ಬರೆದೆ. ಲಂಡನ್ ನಲ್ಲಿ ಕ್ರಾಂತಿಕಾರಿಗಳು ಅನಿಸಿ ಕೊಂಡವರನ್ನೆಲ್ಲ ಕಂಡೆ. ಅವರ ಧೈರ್ಯಕ್ಕೆ ಮೆಚ್ಚಿದೆನಾಗಲಿ ಅವರ ಉತ್ಸಾಹ ತಪ್ಪು ದಾರಿ ಹಿಡಿಯಿತು ಅನಿಸಿತು. ಹಿಂದೂಸ್ಥಾನದ ದುಃಖಕ್ಕೆ ನಿವಾರಣೋಪಾಯ ಹಿಂಸೆಯಲ್ಲ ; ಭಾರತೀಯ ಸಂಸ್ಕೃತಿಗೆ ತಕ್ಕಂತೆ ಆತ್ಮ ಸಂರಕ್ಷಣೆಗೆ ಬೇರಾವುದಾದರೂ ಉತ್ತಮೋಪಾಯವನ್ನು ಅವ ಲಂಬಿಸಬೇಕು ಅನಿಸಿತು.ದಕ್ಷಿಣ ಆಫ್ರಿಕಾದ ಸತ್ಯಾಗ್ರಹಕ್ಕೆ ಇನ್ನೂ ಎರಡು ಕೂಡಾ ತುಂಬಿರಲಿಲ್ಲ. ಆದರೂ ಈ ವಿಷಯವಾಗಿ ಕೊಂಚ ಧೈರ್ಯ ವಾಗಿಯೇ ಬರೆಯುವಷ್ಟು ಬೆಳೆದಿತ್ತು. ಆಗ ನಾನು ಬರೆದಿದ್ದನ್ನು ಜನರು ಮೆಚ್ಚಿದರು. ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆವು. ಅದು ಹಿಂದೂ ಸ್ಥಾನದಲ್ಲೂ ಕೆಲವು ಜನರ ಕಣ್ಣಿಗೆ ಬಿತ್ತು. ಬೊಂಬಾಯಿ ಸರಕಾರ ಅದನ್ನು ನಿಷೇಧ ಮಾಡಿತು. ಅದರ ಭಾಷಾಂತರವನ್ನು ಪ್ರಕಟಿಸಿ ಸರಕಾರಕ್ಕೆ ಉತ್ತರ ಕೊಟ್ಟೆ, ಅದರಲ್ಲಿ ಏನಿದೆಯೋ ? ನನ್ನ ಇಂಗ್ಲೀಷ್ ಗೆಳೆಯರಿಗೆ ತಿಳಿಸುವುದು ನನ್ನ ಕರ್ತವ್ಯವೆಂದು ಹಾಗೆ ಮಾಡಿದೆ.

ಈ ಪುಸ್ತಕವನ್ನು ಎಳೆಯ ಮಗುವಿಗೂ ಕೊಡಬಹುದು. ಇದು ದ್ವೇಷದ ಬದಲಾಗಿ ಪ್ರೀತಿಯನ್ನು ಬೋಧಿಸುತ್ತದೆ. ಹಿಂಸೆಗೆ ಬದಲು ಪ್ರೀತಿಯನ್ನು ಬೋಧಿಸುತ್ತದೆ. ಆತ್ಮತ್ಯಾಗವನ್ನು ಕಲಿಸುತ್ತದೆ. ಪಶು ಬಲಕ್ಕೆ ವಿರುದ್ಧವಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ.

ಎಷ್ಟೋ ಸಲ ಈ ಪುಸ್ತಕ ಅಚ್ಚಾಗಿದೆ.ಓದು ಬಯಸುವ ಎಲ್ಲರಿಗೆಲ್ಲ ಇದು ಓದಲು ಯೋಗ್ಯವೆಂದು ಸೂಚಿಸುತ್ತೇನೆ. ಇದರಲ್ಲಿ ಒಂದು ಪದವನ್ನಾದರೂ ಬದಲಾಯಿಸಲಾರೆ.ಒಂದೇ ಒಂದನ್ನು ಒಬ್ಬ ಗೆಳತಿಯ ತೃಪ್ತಿಗಾಗಿ ತೆಗೆದು ಹಾಕಿದ್ದೇನೆ.


ಈ ಗ್ರಂಥ ಆಧುನಿಕ ನಾಗರಿಕತೆಯ ಮೇಲೆ ತೀವ್ರ ವಿಮರ್ಶೆ, ಖಂಡನೆ 1908 ರಲ್ಲಿ ಬರೆದದ್ದಾದರೂ ಅಂದಿಗಿಂತಲೂ ಇಂದು ನನಗದರಲ್ಲಿ ಹೆಚ್ಚು ನಂಬಿಕೆಯಾಗಿದೆ. ಹಿಂದೂಸ್ಥಾನ ಈ ಆಧುನಿಕ ನಾಗರಿಕತೆಯನ್ನು ವರ್ಜಿಸಿದರೆ ಅದರಿಂದ ಲಾಭವೇ ಆದೀತು ಅನಿಸುತ್ತದೆ ನನಗೆ..'

ರಾಷ್ಟ್ರಪಿತ ಮಹಾತ್ಮ ಗಾಂಧಿ..
(ಯಂಗ್ ಇಂಡಿಯಾ – ಜನವರಿ 1921)

ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು.

– ಮಹಾತ್ಮ ಗಾಂಧಿ

NCERTಯ ಆಘಾತಕಾರಿ ಕ್ರಮದ ಹೊರತಾಗಿಯೂ
ಜೀವಂತವಾಗಿರುವ ಗಾಂಧಿ



ಗಾಂಧಿ ಹತ್ಯೆಯ ವಿಷಯವನ್ನು ಎನ್.ಸಿ.ಇ.ಆರ್.ಟಿ (NCERT)ಯ ಇತಿಹಾಸ ಪಠ್ಯ ಪುಸ್ತಕದಿಂದ ತೆಗೆದುಹಾಕುವ ನಿರ್ಧಾರದಿಂದಷ್ಟೇ ಮಹಾತ್ಮರ ನೆನಪನ್ನು ಅಳಿಸಲಾಗದು.

ಕಾಲು ಶತಮಾನಕ್ಕೆ ಮೊದಲು ನಾನು ಗುಜರಾತಿನ ಬರೋಡದಲ್ಲಿ ಭಿಕ್ಷುಕರ ವಿಷಯದಲ್ಲಿ ಅವರ ಜೊತೆಗೆ ಕೆಲಸ ಮಾಡುತ್ತಿದ್ದೆ. ಆರಂಭದಲ್ಲಿ ನಾನು ನಗರದಲ್ಲಿ ಎಷ್ಟು ಮಂದಿ ಭಿಕ್ಷುಕರು ಇದ್ದಾರೆ ಮತ್ತು ಅವರು ಒಂದು ಸಮುದಾಯವಾಗಿ ಹೇಗೆ ರೂಪುಗೊಂಡಿದ್ದಾರೆ ಎಂದು ತಿಳಿದುಕೊಳ್ಳಲು ಯತ್ನಿಸುತ್ತಿದ್ದೆ. ಇದರಿಂದಾಗಿ ನನಗೆ ಅವರಲ್ಲಿ ಹಲವರ ಜೊತೆಗೆ ಆಳವಾದ ಗೆಳೆತನ ಹೊಂದುವುದು ಸಹಜವಾಗಿತ್ತು. ಬೇಸಿಗೆಯಲ್ಲಿ ಬಿಸಿಲಿನ ಝಳ ತಡೆಯಲಾಗದೇ ಸಮಯ ಕಳೆಯಲೆಂದು ಅವರು ಆಗಾಗ ನನ್ನ ಕಚೇರಿಗೆ ಬಂದು, ಅಂಚೆಯ ಲಕೋಟೆಗೆ ಗೋಂದು ಅಂಟಿಸುವುದು, ಕುರ್ಚಿ ಮೇಜು ಒರೆಸುವುದು ಮುಂತಾದ ಚಿಕ್ಕಪುಟ್ಟ ಕೆಲಸಗಳಲ್ಲಿ ನನಗೆ ನೆರವಾಗುತ್ತಿದ್ದರು.

ಅವರಲ್ಲಿ ಮೂಲತಃ ಆಂಧ್ರಪ್ರದೇಶದವರಾದ ವಯಸ್ಸಾದ ಮಹಿಳೆಯೊಬ್ಬರು ಇದ್ದರು. ಕೆಲಸ ಮಾಡುತ್ತಿದ್ದ ಅವರ ಗಂಡುಮಕ್ಕಳು ಅವರನ್ನು ತೊರೆದುಬಿಟ್ಟಿದ್ದರು. ಆಕೆಗೆ ಓದು ಬರಹ ಗೊತ್ತಿರಲಿಲ್ಲ ಮತ್ತು ದೀರ್ಘ ಸಂಭಾಷಣೆಯೂ ಆಕೆಗೆ ಇಷ್ಟವಿರಲಿಲ್ಲ. ಒಂದು ದಿನ ಆಕೆ ಕುರ್ಚಿಯಲ್ಲಿ ಕುಳಿತಿದ್ದಾಗ, ನಾನು ಗೋಡೆಯಲ್ಲಿದ್ದ ಒಂದು ಚಿತ್ರವನ್ನು ತೋರಿಸಿ, "ಈ ಮನುಷ್ಯ ಯಾರೆಂದು ಗೊತ್ತೆ?" ಎಂದು ಕೇಳಿದೆ. ಒಂದು ಕ್ಷಣವೂ ತಡವರಿಸದೇ ಆಕೆ ಹೇಳಿದರು: "ಮಹಾತ್ಮಾ ಗಾಂದಿ." ನಿಜವಾಗಿಯೂ ಹೇಳುತ್ತೇನೆ: ಆಕೆಗೆ ಅವರ್ಯಾರೆಂದು ಗೊತ್ತಿರಬಹುದು ಎಂದು ನಾನು ನಿರೀಕ್ಷಿಸಿಯೇ ಇರಲಿಲ್ಲ; ಯಾಕೆಂದರೆ, ಆಕೆ ಶಾಲೆಯ ಮೆಟ್ಟಲೇ ಹತ್ತಿದವರಲ್ಲ. ನನಗೆ ಆಶ್ಚರ್ಯವಾಗಿತ್ತು. ಆದರೆ, ನನಗೆ ಹೆಚ್ಚು ಆಶ್ಚರ್ಯ ಆದದ್ದು ಯಾವಾಗೆಂದರೆ, ಆಕೆ ಆ ವ್ಯಕ್ತಿ ಹತ್ತಿರದ ವ್ಯಕ್ತಿ ಎಂಬಂತೆ ವಿವರವಾಗಿ ಉದ್ದಕ್ಕೆ ಮಾತನಾಡಿದಾಗ– ಆಕೆ ಗಾಂಧಿ ಬಗ್ಗೆ ಮಾತುಗಳನ್ನು ಕೊನೆಗೊಳಿಸಿದ್ದು ಹೀಗೆ: "ಒಬ್ಬ ನಿಜವಾದ ಮನುಷ್ಯ, ಬೇರೆಯವರೆಲ್ಲ ನಕಲಿ."

ಗಾಂಧಿಯೊಳಗೆ ಇದ್ದಿದ್ದಾದರೂ ಏನು– ಭಾರತದ ಆತ್ಮವನ್ನೇ ತಟ್ಟುವಂತದ್ದು?– ಪ್ರತೀ ಭಾರತೀಯನೊಳಗಿನ ಅರೆ ಪ್ರಜ್ಞೆ ತಾನೇ ಎಂಬಂತೆ ನೆಲೆಯಾಗಿ ಉಳಿದಿರುವಂತದ್ದು? ಈ ಘಟನೆ ಗಾಂಧಿ ಮರಣವಾಗಿ 55 ವರ್ಷಗಳ ನಂತರ ನಡೆದದ್ದು. ಇಷ್ಟು ಕಾಲಾನಂತರದಲ್ಲಿಯೂ, ಆ ಗುಜರಾತಿನಲ್ಲಿ ಬದುಕುತ್ತಿರುವ ಆಂಧ್ರದ ಹೆಣ್ಣು ಮತ್ತು ಆತನ ಸಾಮಾಜಿಕ ಅಂತರಗಳ ನಡುವೆಯೂ– ಯಾವುದೇ ಪರಿಚಯ ಮಾಡಿಕೊಡುವ ನೆಲೆ ಅಥವಾ ಆಂಕರ್ ಅಗತ್ಯ ಇಲ್ಲದೇ, ನಡುವೆ ಒಬ್ಬ ಅರ್ಥ ಮಾಡಿಸುವ ಮಧ್ಯವರ್ತಿ ಇಲ್ಲದೇ, ಅವರನ್ನು ಎತ್ತಿ ಕೊಂಡಾಡುವ ಒಂದು ವಾಟ್ಸಪ್ ಕಾರ್ಖಾನೆ ಇಲ್ಲದೇ, ಅವನ್ಯಾಕೆ ಆಕೆಯ ಎದೆಯಲ್ಲಿ ಅಂಟಿಕೊಂಡ?

ನೈತಿಕ ಮೌಲ್ಯಗಳು

"ಒಬ್ಬ ಮನುಷ್ಯ ಮಾತಾಡುತ್ತಾನೆ; ಮತ್ತೆ ಮತ್ತೆ ಮಾತಾಡುತ್ತಾನೆ ಎಂಬ ಕಾರಣಕ್ಕೇ

ಆತನನ್ನು ವಿವೇಕಿ ಎಂದು ಕರೆಯಲಾಗದು. ಆದರೆ, ಆತ ಶಾಂತಿಯುತನಾಗಿ ಇದ್ದರೆ, ಪ್ರೀತಿಸುವವನಾಗಿ ಇದ್ದರೆ, ಆಗ ಮಾತ್ರವೇ ಆತನನ್ನು ನಿಜವಾಗಿಯೂ ವಿವೇಕಿ ಎಂದು ಕರೆಯಬಹುದು" ಎಂಬುದು ಗೌತಮಬುದ್ಧರ ಎಲ್ಲರಿಗೂ ಗೊತ್ತಿರುವ ಮಾತುಗಳು. ಈ ಮಾತುಗಳ ಶಾಶ್ವತತೆಗೆ ಒಂದು ಅತ್ಯಂತ ಅಪೂರ್ವ ಉದಾಹರಣೆ ಎಂದರೆ, ಮೋಹನದಾಸ ಗಾಂಧಿಯ ಜೀವನ– ಮತ್ತು ಬುದ್ಧನ ನಂತರದ ಎರಡೂವರೆ ಸಹಸ್ರಮಾನದ ಬಳಿಕ– ಆತ ಭಾರತೀಯ ಉಪಖಂಡದಲ್ಲಿ ಸ್ಥಾಪಿಸಿದ ನೈತಿಕ ಮೌಲ್ಯಗಳು. ಗಾಂಧಿ ಭಾರತೀಯ ರಾಜಕೀಯ ಚಿತ್ರಣಕ್ಕೆ ಕಾಲಿಡುವ ಮೊದಲೇ ಒಂದು ದಂತಕತೆಯಾಗಿದ್ದರು– ಅವರನ್ನು ಕ್ರೂರವಾಗಿ ಕೊಲೆ ಮಾಡುವ ಸಮಯಕ್ಕೆ ಜೀವಂತ ಪುರಾಣವಾಗಿಹೋಗಿದ್ದರು. ಅವರು ರಾಜಕೀಯ ಸಿದ್ಧಾಂತ ಅಥವಾ ನೈತಿಕತೆಗಳ ಬಗ್ಗೆ ಭಾರೀ ಪುಸ್ತಕಗಳನ್ನು ಬರೆದರೆಂದರಲ್ಲ– ಆದರೂ ಅವರ ಚಿಂತನೆಗಳು ಕೋಟ್ಯಂತರ ಜನರನ್ನು ಮುಟ್ಟಿವೆ ಮತ್ತು ಆಗಣಿತ ಜನರ ಜೀವನವನ್ನು ಬದಲಾಯಿಸಿದೆ.

ಗಾಂಧಿಯವರ ಮಾಂತ್ರಿಕತೆ ಎಂದರೆ, ಅದು ಅವರ ಅಗಾಧ ನೈತಿಕ ಅಧಿಕಾರದಿಂದ ಹುಟ್ಟಿರಲಿ, ಅಥವಾ ಆಕಸ್ಮಿಕವಾದ ಅವರ ಐತಿಹಾಸಿಕ ಸ್ಥಾನದ ಕಾರಣದಿಂದಲೇ ಇರಲಿ– ಅದು ಅವರ ಜೀವನ ಚರಿತ್ರಕಾರರ, ವಿಮರ್ಶಕರ, ಹಿಂಬಾಲಕರ ಮತ್ತವರ ವಿಷಕಾರಿ ಟೀಕಾಕಾರರು, ನಿಂದಕರನ್ನೂ ತಟ್ಟದೇ ಬಿಟ್ಟಿಲ್ಲ. ಖಂಡಿತವಾಗಿಯೂ ಅವರ ಹೆಸರನ್ನು ಕಳೆದ ನೂರು ವರ್ಷಗಳಲ್ಲಿ ಎಷ್ಟು ವಿದ್ವಾಂಸರ ಪುಸ್ತಕಗಳಲ್ಲಿ, ಪ್ರಬಂಧಗಳಲ್ಲಿ, ಸಾರ್ವಜನಿಕ ಉಪನ್ಯಾಸ, ಭಾಷಣಗಳಲ್ಲಿ, ರಾಜಕೀಯ ಬೋಧನೆಗಳಲ್ಲಿ, ನಾಟಕೀಯ ಚಿತ್ರಣಗಳಲ್ಲಿ, ಚಲನಚಿತ್ರಗಳಲ್ಲಿ, ಕಲಾಕೃತಿಗಳಲ್ಲಿ, ಕೌಟುಂಬಿಕ ಮಾತುಕತೆಗಳಲ್ಲಿ ಮತ್ತು ಕೋಟ್ಯಂತರ ಜನರ ಯೋಚನೆಗಳಲ್ಲಿ ಉಲ್ಲೇಖಿಸಲಾಗಿದೆ ಎಂದು ಲೆಕ್ಕಹಾಕಲೇ ಸಾಧ್ಯವಿಲ್ಲ.

ಯಾವುದೇ ನಾಯಕ, ಚಿಂತಕ, ಕಾರ್ಯಕರ್ತ, ಸಂತ, ಕಲಾವಿದ, ಕ್ರೀಡಾಳು, ವಿಜ್ಞಾನಿ, ರಾಜಮಹಾರಾಜರು ಅಥವಾ ಬರಹಗಾರರ ಗಾಂಧಿಯವರ ಹಲವು ಆಯಾಮಗಳು ಪಡೆದ ಪ್ರಸಿದ್ಧಿಯ ಮಟ್ಟಕ್ಕೆ ತಲುಪಲು ಸಾಧ್ಯವಾಗಿಲ್ಲ.

ಒಬ್ಬ ಕೊಲೆಗಾರನ ಗುಂಡುಗಳಿಂದ ಗಾಂಧಿ ಸತ್ತ ಬಳಿಕ ಇಡೀ ಪ್ರಪಂಚವೇ ಈ ಕೃತ್ಯದ ಕ್ರೌರ್ಯದಿಂದ ಸ್ತಂಭೀಭೂತವಾಯಿತು. ಹಲವಾರು ಸಂಪುಟಗಳಲ್ಲಿ ಮುದ್ರಿಸಬಹುದಾದಷ್ಟು ಶ್ರದ್ಧಾಂಜಲಿ ಪ್ರತಿಕ್ರಿಯೆಗಳು ವ್ಯಕ್ತವಾದವು. ಅವುಗಳಲ್ಲಿ ಅತ್ಯುತ್ತಮವಾದುದು ಎಂದರೆ, 20ನೇ ಶತಮಾನದ ಅಪ್ರತಿಮ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರಿಂದ ಬಂದದ್ದು. ಇಂತಹ ಒಬ್ಬ ಮನುಷ್ಯ ರಕ್ತ ಮಾಂಸಗಳ ಜೊತೆ ಈ ಭೂಮಿಯಲ್ಲಿ ನಡೆದಾಡುತ್ತಿದ್ದ ಎಂದು ಹೇಳಿದರೆ, ಮುಂದಿನ ಹಲವಾರು ತಲೆಮಾರುಗಳವರು ನಂಬುವುದು ಕಷ್ಟ ಎಂದು ಐನ್‌ಸ್ಟೀನ್ ಬರೆದರು.

ಗಾಂಧಿಯವರ ಹತ್ಯೆಯಾದ ಬಿರ್ಲಾ ಹೌಸಿನ ಹಿತ್ತಿಲ ಉದ್ಯಾನದ ರಸ್ತೆಗೆ ಅವರ ಕೊಲೆಯಾದ ದಿನದ ಹೆಸರಿನಲ್ಲಿ "ತೀಸ್ ಜನವರಿ ರೋಡ್" (ಮೂವತ್ತು ಜನವರಿ ರಸ್ತೆ) ಎಂಬ ಹೆಸರಿಡಲಾಗಿದೆ. ಕಲ್ಲಿನಲ್ಲಿ ಕೆತ್ತಲಾಗಿರುವ ಈ ಪ್ರಸಿದ್ಧ ಸಮಾಧಿ ಬರಹವು ಗಾಂಧಿ ಎಂಬ ಅದ್ಭುತ ದಂತಕತೆಯ ಆಯಾಮಗಳನ್ನು ಮತ್ತೆಮತ್ತೆ ನೆನಪಿಸುತ್ತದೆ. ಅದಕ್ಕಿಂತಲೂ ಅತಿ ಮುಖ್ಯ ವಿಷಯವೆಂದರೆ, ಕಣ್ಣಿಗೆ ರಾಚುವ ಈ ಸ್ಮಾರಕದ ಸರಳತೆ. ಗಾಂಧಿಯವರು ಗುಂಡುಗಳಿಗೆ ಎದೆಯೊಡ್ಡಿದ ಆ ನಿರ್ದಿಷ್ಟ ಸ್ಥಳಕ್ಕೆ ಯಾರು ಬೇಕಾದರೂ ನಡೆದು ಹೋಗಬಹುದು ಮತ್ತು ಕ್ಷಣಮಾತ್ರವಾದರೂ ಅವರ ಜೊತೆಗೆ ಇದ್ದ, ಅಥವಾ ಅವರೇ ಆಗಿದ್ದ ಕಲ್ಪನೆಯನ್ನು ಮಾಡಿಕೊಳ್ಳಬಹುದು.

ಗಾಂಧಿ ಅಥವಾ ಅವರಿಗೆ ಸಂಬಂಧಿಸಿದ ಎಲ್ಲವನ್ನೂ ಸಮೀಪಿಸುವ ಸರಳತೆಯನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಒಂದು ದಶಕದ ಕಾಲ ಗಾಂಧಿಯವರು ಜೀವನ ಕಳೆದ ಸಾಬರಮತಿ ಆಶ್ರಮಕ್ಕೆ ಭೇಟಿ ನೀಡಿದವರಿಗೂ ಅದೇ ಅನುಭವ. ಅವರು ಬದುಕಿದ್ದ ಆ ಮನೆ ಅವರೇ ವಿನ್ಯಾಸ ಮಾಡಿದ್ದು. ಅದರೊಳಗಿನ ಜಾಗವು ನಿರ್ಮಲ, ಪ್ರಶಾಂತ ಮತ್ತು ಸುಂದರ. ಅದನ್ನು "ಹೊರಗಡೆ" ಮತ್ತು "ಒಳಗಡೆ" ಎಂದು ವಿಭಜಿಸಲು ಸಾಧ್ಯವಿಲ್ಲ. ಅವು ಒಂದು ಇನ್ನೊಂದರ ಒಳಗೆ ಸಂಪೂರ್ಣವಾಗಿ ವಿಲೀನವಾಗಿವೆ. ಅದು ಗಾಂಧಿಯವರು ಬದುಕಿದ ಜೀವನವನ್ನಲ್ಲದೆ ಇನ್ನೇನನ್ನೂ ಪ್ರತಿಫಲಿಸುವುದಿಲ್ಲ. ಆ ಮಹಾತ್ಮರು ಬದುಕಿದ್ದರು ಮತ್ತು ಯುಗಮಾನಗಳ ಕಾಲ ಬದುಕಿರುತ್ತಾರೆ– ನೀವು ಅವರಿಗೆ ಹತ್ತಿರವಾಗುವಂತೆ ಮಾಡಬಲ್ಲ ಅವರ ಸಾಮರ್ಥ್ಯ ಮತ್ತು ಅವರಿಗೆ ಅತಿಮಾನವ, ದಂತಕತೆಯ ಆಯಾಮ ನೀಡಬಲ್ಲ ಅಗಾಧ ಚಿಂತನೆ ಮತ್ತು ಕಾರ್ಯಗಳ ಸಂಗಮದಿಂದ.

ನಾನು ಆಂಧ್ರದ ಆ ಮಹಿಳೆಯನ್ನು ಭೇಟಿಯಾದದ್ದು 2002ರಲ್ಲಿ– ಭವಿಷ್ಯದ ಗುಜರಾತಿ ತಲೆಮಾರುಗಳು ನಾಚಿಕೆಯಿಂದ ತಲೆ ಬಗ್ಗಿಸಬೇಕಾಗುವಂತೆ ಮಾಡಿದ ನರಮೇಧ ನಡೆದ ವರ್ಷ. ಹದಿನೇಳು ವರ್ಷಗಳ ನಂತರ ಮೋಹನದಾಸ ಗಾಂಧಿಯವರ 150ನೇ ಜನ್ಮದಿನಾಚರಣೆ ನಡೆಯಲಿತ್ತು. ಆ 17 ವರ್ಷಗಳು ಗಾಂಧಿಯವರ ಇಮೇಜನ್ನು ಮಲಿನಗೊಳಿಸಲು ಬಿಜೆಪಿಯ ಅಪಪ್ರಚಾರ ಯಂತ್ರಕ್ಕೆ ಸಾಕಾಗಿದ್ದವು. ಈ ಅದ್ಭುತ ಬ್ಯಾರಿಸ್ಟರ್ ಅವರ ಇಮೇಜನ್ನು ಸರಕಾರಿ ಪ್ರಚಾರದ ಪೋಸ್ಟರುಗಳಲ್ಲಿ ಕಾಣಿಸಲಾಯಿತು– ಅವರ ಕನ್ನಡಕ ಮತ್ತು ಹಿನ್ನೆಲೆಯಲ್ಲಿ ಶೌಚಾಲಯದ ಚಿತ್ರದ ಮೂಲಕ ಮಾತ್ರ. ಆ ಹೊತ್ತಿಗೆ ಆ ಆಡಳಿತವು ಧರ್ಮದ ಹೆಸರಿನಲ್ಲಿ ಭಾರತೀಯ ಜನತೆಯನ್ನು ವಿಭಜಿಸಲು ಯಶಸ್ವಿಯಾಗಿತ್ತು. ಮುಸ್ಲಿಮರು ಮತ್ತು ದಲಿತರನ್ನು ಗುಂಪು ಹಲ್ಲೆಗಳಿಂದ ಕೊಲ್ಲುವುದು ಆ ದಿನಗಳ ಕಾನೂನಾಗಿತ್ತು. ಗೋರಕ್ಷಕರು ಅಮಾಯಕ ಜನರನ್ನು ಬೆದರಿಸಲು ಅನಿಯಂತ್ರಿತ ಪರವಾನಗಿ ಪಡೆದಿದ್ದರು. ಸ್ವತಃ ಬೆದರಿಕೆಗೆ ಒಳಗಾಗಿದ್ದ ರಾಷ್ಟ್ರೀಯ ಮಾಧ್ಯಮಗಳಿಗೆ, ಮುಖ್ಯವಾಗಿ ಟಿವಿಗಳಿಗೆ ಇದುವೇ ನಿತ್ಯದ ಆಹಾರವಾಗಿತ್ತು. ಪ್ರಸಿದ್ಧ ವಿಚಾರವಾದಿ ಚಿಂತಕರಾದ ನರೇಂದ್ರ ದಾಬೋಲ್ಕರ್, ಗೋವಿಂದ ಪನ್ಸಾರೆ, ಎಂ.ಎಂ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಮುಂತಾದವರನ್ನು ಗುಂಡಿನಿಂದಲೇ ಕೊಲ್ಲಲಾಯಿತು.

ಕಾನೂನು ಮತ್ತು ಶಿಸ್ತು ಕಾಪಾಡಬೇಕಾದ ಸಂಸ್ಥೆಗಳು ಯಾವುದೇ ಮತ್ತು ಎಲ್ಲ ಭಿನ್ನಮತವನ್ನು ದಮನಿಸುವುದರಲ್ಲೇ ವ್ಯಸ್ತವಾಗಿದ್ದವು. ಪ್ರತಿರೋಧ ವ್ಯಕ್ತಪಡಿಸುವವರನ್ನು ಟ್ರೋಲ್ ಮಾಡಲು ಸಾಮಾಜಿಕ ಮಾಧ್ಯಮವನ್ನು ಕೈಗಾರಿಕೆಯ ಪ್ರಮಾಣದಲ್ಲಿ ಬಳಸಲಾಯಿತು.

ಇದು ಭಾರತದಲ್ಲಿ ಸಾಮಾನ್ಯ ಪರಿಸ್ಥಿತಿ ಆಗಿದ್ದರೆ, ಅಂತಾರಾಷ್ಟ್ರೀಯ ಪರಿಸ್ಥಿತಿ ಬೇರೆಯೇನೂ ಆಗಿರಲಿಲ್ಲ. ಯುರೋಪಿನಲ್ಲಿ ತೀವ್ರ ಬಲಪಂಥವು ಏರುದಿಸೆಯಲ್ಲಿತ್ತು. ಟರ್ಕಿ, ಈಜಿಪ್ಟ್, ಬ್ರೆಝಿಲ್ ಮತ್ತು ಚೀನಾ

ಸರ್ವಾಧಿಕಾರಿ ಆಡಳಿತದ ಅಡಿಗೆ ಬಂದವು. ಜರ್ಮನಿ, ಇಟಲಿ, ಸ್ಪೇನ್ ಮತ್ತು ಫ್ರಾನ್ಸಿನಂಥ ಪ್ರಜಾಸತ್ತಾತ್ಮಕ ಸರಕಾರಗಳು ಕೆಲಸ ಮಾಡಲು ಬಲಪಂಥೀಯರ ನೆರವು ಕೋರಬೇಕಾಯಿತು. ಯುಎಸ್ಸಲ್ಲಿ ಡೊನಾಲ್ಡ್ ಟ್ರಂಪ್ ಅಧ್ಯಕ್ಷೀಯ ಚುನಾವಣೆ ಗೆದ್ದು "ಸತ್ಯೋತ್ತರ" (ಠಿಥಿಣ–ಣಡಿಣಾಣ) ಎಂದು ಕರೆಯಲಾಗುವ ಯುಗವು ತ್ವರಿತವಾಗಿ ರೆಕ್ಕೆ ಬಿಚ್ಚುತ್ತಿತ್ತು.

ಸತ್ಯೋತ್ತರ ವಾಸ್ತವಗಳು

'ಸತ್ಯೋತ್ತರ ಯುಗ ಮತ್ತು ಹಿಂಸಾಚಾರ'ದ ಕುರಿತು ಸತ್ಯ ಮತ್ತು ಅಹಿಂಸೆಯ ವಿರುದ್ಧವಾಗಿ ದೇಶದ ಒಳಗಡೆಯೂ, ಹೊರಗಡೆಯೂ ಜನರು ದೊಡ್ಡ ಮಟ್ಟದಲ್ಲಿ ಯೋಚಿಸಲು ಆರಂಭಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ಆದುದರಿಂದ ಪ್ರಜಾಪ್ರಭುತ್ವ, ಸಾರ್ವಜನಿಕ ಜೀವನದಲ್ಲಿ ಸನ್ನಡತೆ, ಸಾಮಾಜಿಕ ಸಾಮರಸ್ಯ ಮುಂತಾದ ವಿಚಾರಗಳ ಬಗ್ಗೆ ಒಲವಿರುವವರ ಮನಗಳಲ್ಲಿ ಗಾಂಧಿಯವರ ನೆನಪು ಅಲೆಅಲೆಯಾಗಿ ಮತ್ತೆ ತೇಲಿಬಂತು. ಎಡಪಂಥೀಯರು, ಉದಾರವಾದಿ ಪ್ರಜಾಪ್ರಭುತ್ವವಾದಿಗಳು, ಕಾರ್ಮಿಕ ಸಂಘಟನೆಗಳ ನಾಯಕರು, ಕಲಾವಿದರು, ಬರಹಗಾರರು, ಹಾಡುಗಾರರು ಗಾಂಧಿಯವರ ಕಡೆಗೆ ಮರಳುವುದು ಸಾಮಾನ್ಯವಾಯಿತು. ಸಾಮಾನ್ಯವಾಗಿ ಗಾಂಧಿಯವರ ಕುರಿತು ಬೇಸರ ಹೊಂದಿರುವ ಅಂಬೇಡ್ಕರ್‌ವಾದಿಗಳು ಕೂಡಾ, ಗಾಂಧಿಯವರ ಕಡೆಗೆ ಕಡಿಮೆ ತಿರಸ್ಕಾರದಿಂದ ನೋಡಲಾರಂಭಿಸಿದರು. ಗಾಂಧಿವಾದವನ್ನು ಕೇವಲ ಆಚರಣೆಯ ಮಟ್ಟಕ್ಕೆ ಇಳಿಸಿದ್ದ ಗಾಂಧೀವಾದಿಗಳು ಕೂಡಾ ಗಾಂಧಿಯವರನ್ನು ಮತ್ತೆ ಕಂಡುಕೊಳ್ಳುವ ಅಗತ್ಯವನ್ನು ಮನಗಾಣಲು ಆರಂಭಿಸಿದರು. ಹಲವಾರು ಸಮಾನಮನಸ್ಕ ಸಾಮಾಜಿಕ ಮಾಧ್ಯಮ ಗುಂಪುಗಳು ಆರಂಭಗೊಂಡು ಗಾಂಧಿಯವರ ವಿಚಾರಧಾರೆಗಳ ಬಗ್ಗೆ ಚರ್ಚಿಸಲು ಆರಂಭಿಸಿದವು. ಈ ಎಲ್ಲರೂ ಬೇರೆಬೇರೆ ಮಟ್ಟಗಳಲ್ಲಿ ಹತ್ತಿರ ಬಂದು ಗಾಂಧಿ ಮತ್ತು ಅಂಬೇಡ್ಕರ್ ಪರಂಪರೆಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನದಾಗಿ ಅಪ್ರಾಪ್ರಿಯೇಟ್ ಮಾಡಿಕೊಳ್ಳುವ ಭಯವನ್ನು ವ್ಯಕ್ತಪಡಿಸಲು ಆರಂಭಿಸಿದರು. ವಿಪರ್ಯಾಸ ಎಂದರೆ ಗಾಂಧಿಯವರ ನೆನಪನ್ನು ಅಳಿಸಲು ಪ್ರಯತ್ನಿಸಿದಷ್ಟು ಅದು ಹೆಚ್ಚುಹೆಚ್ಚಾಗಿ ಪಡಿಮೂಡಲು ಆರಂಭಿಸಿತು.

ಗಾಂಧಿ ಹತ್ಯೆಯನ್ನು ಇತಿಹಾಸದ ಪಠ್ಯದಿಂದ ತೆಗೆದುಹಾಕುವ ಎನ್ಸಿಇಆರ್ಟಿ ನಡೆಯು ಲಕ್ಷಾಂತರ ಜನರಿಗೆ ಆಘಾತ ಉಂಟುಮಾಡಿದೆಯಾದರೂ, ಎಲ್ಲರೂ ಸಂಘಟಿತ ರೀತಿಯಲ್ಲಿ ತಮ್ಮ ದಿಗಿಲನ್ನು ವ್ಯಕ್ತಪಡಿಸಿಲ್ಲ. ನಾನು ಎನ್‌ಸಿಆರ್‌ಟಿ ನಡೆಯ ಕುರಿತು ಓದಿದ ದಿನ ಆಂಧ್ರದ ಆ ಮಹಿಳೆಯ ಉತ್ತೇಜಿತ ಮುಖವು ಧುತ್ತನೇ ಮನಸ್ಸಿನಲ್ಲಿ ಮೂಡಿತು. ಆ ಮುಖವು ಗಾಂಧಿಯವರ ಕುರಿತು ಆಡಿದ ಮೆಚ್ಚುಗೆಯ ಮಾತುಗಳನ್ನು ನೆನಪಿಸಿದ ಕೂಡಲೇ ನಾನು ನನಗೇ ಹೇಳಿಕೊಂಡೆ: "ಪಠ್ಯಪುಸ್ತಕ ಇರಲೀ, ಇಲ್ಲದೆಯೇ ಇರಲಿ, ಗಾಂಧಿ ಬದುಕಿಯೇ ಇರುತ್ತಾರೆ. ಆ ಮಹಿಳೆ ಹೇಳಿದಂತೆ ಅವರು ನಿಜ ಮನುಷ್ಯ. ಹಲವಾರು ನಕಲಿಗಳು ಅಪಪ್ರಚಾರವು ಎತ್ತಿಹಿಡಿದಷ್ಟು ದಿನ ಮಾತ್ರ ಚಲಾವಣೆಯಲ್ಲಿ ಇರುತ್ತಾರೆ. ನಾನು ಎನ್ಸಿಇಆರ್ಟಿ ಅಧಿಕಾರಸ್ಥರಿಗೆ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ: ಮುಂದೆ ಪ್ರಪಂಚವು ಮನಗಾಣಲಿರುವಂತೆ, ಸುಮ್ಮನೇ ಹಾಗೆಯೇ ಮಹಾತ್ಮರ ನೆನಪನ್ನು ಅಳಿಸಲು ಸಾಧ್ಯವಿಲ್ಲ. ಅವರು ಮಹಾತ್ಮ ಏಕೆಂದರೆ, ಅವರ ಸತ್ಯ ಮತ್ತು ಅಹಿಂಸೆಯು ಪ್ರತಿಯೊಬ್ಬರ ಆತ್ಮವನ್ನು ತಟ್ಟಿದೆ. ಇದು ಆತ್ಮದ ಪ್ರಶ್ನೆ ಮತ್ತು ಅದು ಬೆದರಿಕೆಗೆ ಒಳಗಾಗಿರುವ ಅಥವಾ ಶಾಲೆಗೆ ಹೋಗುವ ಮಕ್ಕಳೂ ಎದ್ದುನಿಲ್ಲಬೇಕೆಂದು ಬಯಸುವಲ್ಲಿ, ತೆವಳುವ ಗುಲಾಮಿ ದೇಹಗಳ ಗ್ರಹಿಕೆಯಿಂದ ಸದ್ಯಕ್ಕೆ ಹೆಚ್ಚುಕಡಿಮೆ ಹೊರಗಿದೆ."

– ಜಿ ಎನ್ ದೇವಿ

(ಭಾರತದ ಖ್ಯಾತ ಚಿಂತಕರಲ್ಲಿ ಒಬ್ಬರಾದ ದೇವಿ ಅವರು, ಪೀಪಲ್ ಲಿಂಗ್ವಿಸ್ಟಿಕ್ಸ್ ಸರ್ವೆ ಮೂಲಕ ಚಿರಪರಿಚಿತರು. 'ಆಫ್ಟರ್ ಅಮ್ನೇಶಿಯಾ' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಚಳವಳಿಗಳ ಸಂಗಾತಿಯಾಗಿರುವ ದೇವಿ ಸದ್ಯಕ್ಕೆ ದಿ ಸೌತ್ ಫೋರಮ್ನ ಸಂಚಾಲಕರು.)


ಕನ್ನಡಕ್ಕೆ: ನಿಖಿಲ್ ಕೋಲ್ಪೆ

'ಕಣ್ಣಿಗೆ ಪ್ರತಿಯಾಗಿ ಕಣ್ಣು, ಇಡೀ ವಿಶ್ವವನ್ನ ಕುರುಡರನ್ನಾಗಿಸುವಲ್ಲಿ ಅಂತ್ಯವಾಗುತ್ತದೆ."

~ ಮಹಾತ್ಮ ಗಾಂಧಿ



ಚಿತ್ರ : ಬಿ.ಜಿ. ಗುಜ್ಜಾರಪ್ಪ



ಮಹಾತ್ಮ ಗಾಂಧಿಯವರ ಮಹತ್ವಗಳು

- ವಿಶ್ವದ ಎಲ್ಲಾ ರಾಷ್ಟ್ರಗಳು ಅಂದರೆ ' A to Z ' ರಾಷ್ಟ್ರಗಳು (ಆಂಟಿಗುವಾ **to** ಜಿಂಬಾಬ್ವೆ) ನಮ್ಮ ರಾಷ್ಟ್ರಪಿತ ಗಾಂಧೀಜಿಯವರ 'ಅಂಚೆ ಚೀಟಿ' ಗಳನ್ನು ಬಿಡುಗಡೆ ಮಾಡಿವೆ.
- ಇಂಡಿಯಾ ಅಲ್ಲದೆ, ಲಂಡನ್, ಅಮೆರಿಕಾ, ದಕ್ಷಿಣ ಆಫ್ರಿಕಾ, ಸ್ವಿಟ್ಜರ್‌ಲ್ಯಾಂಡ್, ಫ್ರಾನ್ಸ್, ಕೆನಡಾ, ಸ್ಪೇನ್, ಉಗಾಂಡಾ, ದುಬೈ, ಶ್ರೀಲಂಕಾ ಹೀಗೆ ಜಗತ್ತಿನ 184 ರಾಷ್ಟ್ರಗಳ ಪ್ರಮುಖ ಸ್ಥಳಗಳಲ್ಲಿ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪ್ರತಿಮೆಗಳು ಪ್ರತಿಸ್ಥಾಪನೆಗೊಂಡಿವೆ & ಡಿಸೆಂಬರ್ 14, 2022 ರಂದು ವಿಶ್ವ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಗಾಂಧಿ ಪ್ರತಿಮೆ ಲೋಕಾರ್ಪಣೆಯಾಗಿದೆ. ಆ ಪ್ರತಿಷ್ಠಿತ ಸ್ಥಾನ ಪಡೆದ ಪ್ರಪಂಚದ ಏಕೈಕ ನೇತಾರ ಬಾಪೂ.
- ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಮಹಾತ್ಮ ಗಾಂಧೀಜಿಯವರ ಕುರಿತು ಬೋಧನೆ ಮಾಡಲಾಗುತ್ತಿದೆ. ಬಾಪೂ ಪ್ರತಿಪಾದಿಸಿದ ತತ್ವ – ಸಿದ್ಧಾಂತಗಳು, ಸತ್ಯ ಅಹಿಂಸಾ ಮಂತ್ರ, ಅವರು ನಡೆದು ಹೋದ ಶಾಂತಿಯ ಪಥ ಮನುಕುಲ ಉಳಿಯಲು ಅಂತಿಮ ಮಾರ್ಗವೆಂದು ಮನವರಿಕೆ ಮಾಡಿ ಕೊಡಲಾಗುತ್ತಿದೆ. ಮಹಾತ್ಮನ ಮಾನವೀಯ ಮೌಲ್ಯಗಳನ್ನು ಬೋಧಿಸಲಾಗುತ್ತಿದೆ.
- ಸರ್ವರನ್ನು ಪ್ರೀತಿಸುವುದು ಗಾಂಧೀಜಿಯವರ ಜೀವನದ ಪ್ರಮುಖ ಆದ್ಯತೆಯಾಗಿತ್ತು,
- ಚೀನಾ ಮತ್ತು ಜಪಾನ್ ದೇಶಗಳಲ್ಲಿ ಪ್ರಾಥಮಿಕ ತರಗತಿಯಿಂದ 15 ನೇ ತರಗತಿಯವರೆಗೆ ಗಾಂಧೀಜಿಯವರ ಕುರಿತು ಪಾಠ ಮಾಡಲಾಗುತ್ತಿದೆ.
- ಪ್ರಪಂಚದ 1262 ಕಡೆ ಗಾಂಧೀಜಿಯವರ , **Mahatma Gandhi research centre (MGRC)** ಹೆಸರಿನ ಅಧ್ಯಯನ ಕೇಂದ್ರಗಳಿವೆ.
- ಒಂದು ಅರ್ಥದಲ್ಲಿ ನಮಗೆ ರಾಜಕೀಯ ವೈರಿಯಾಗಿದ್ದವರು – ಚರ್ಚಿಲ್. ಎರಡು ಬಾರಿ ಇಂಗ್ಲೆಂಡ್ ನ ಪ್ರಧಾನ ಮಂತ್ರಿ ಕೂಡಾ ಆಗಿದ್ದರು. 1931ರಲ್ಲಿ ಗಾಂಧೀಜಿಯವರನ್ನು **'Half naked pakir'** ಅರೆ ಬೆತ್ತಲೆ ಫಕೀರ ಎಂದು ಮೂದಲಿಸಿದ್ದೇ ಅಲ್ಲದೆ ಸ್ವಾತಂತ್ರ್ಯ ಕೇಳಲು ಬಂದ ಭಾರತೀಯ ಭಿಕ್ಷುಕ ಎಂದು ಅವರನ್ನು ಅಪಮಾನ ಮಾಡಿದ್ದರು.
- ಗಾಂಧಿಯನ್ನು ಕಂಡರೆ ನಖಶಿಖಾಂತ ಉರಿಯುತ್ತಿದ್ದವರು. ಕೊನೆಯವರೆಗೂ ಅವರನ್ನು ದ್ವೇಷ ಮಾಡಿದವರು – ಚರ್ಚಿಲ್. 1948 ರಲ್ಲಿ ಹಂತಕನ ಗುಂಡಿಗೆ ಸರ್ವೋದಯ ತತ್ವದ ಸರ್ವೋಚ್ಚ ನೇತಾರ ಬಾಪೂಜಿ ಬಲಿಯಾದಾಗ, ನಿವೃತ್ತ ಜೀವನ ನಡೆಸುತ್ತಿದ್ದ ಚರ್ಚಿಲ್ , ಗಾಂಧಿ ಹತ್ಯೆಯ ಸುದ್ದಿಯನ್ನು ಕೇಳಿದ ಕೂಡಲೇ, "ಗಾಂಧಿ ಕೊಲೆಯಾದರು ಅನ್ನುವ ಸುದ್ದಿಯನ್ನು ಕೇಳಿ ನನ್ನ ಹೃದಯ ಸ್ತಂಬಿತಗೊಂಡಿತು" ಎಂದು ಉದ್ಗಾರ ತೆಗೆದರು. 'ಸಹೃದಯ ಸ್ನೇಹಿತ' ಎಂದು ಪ್ರತಿ ಸಲವೂ ಗಾಂಧಿ ನನ್ನನ್ನು ಕರೆಯುತ್ತಿದ್ದಾಗ, ಆತನಿಗೆ ಸಕಾರಾತ್ಮಕವಾಗಿ ಸ್ಪಂದಿಸದೇ ನನ್ನ ಅಧಿಕಾರ ದರ್ಪದಿಂದ 'ಅನರ್ಹ ವ್ಯಕ್ತಿಯಂತೆ' ನಡೆದುಕೊಂಡೆ ಎಂದು ತನ್ನ ಆತ್ಮಚರಿತ್ರೆಯಲ್ಲಿ ಚರ್ಚಿಲ್ ಬರೆದುಕೊಂಡಿದ್ದಾರೆ.
- ಜಗತ್ ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರು ತಮ್ಮ ಹೊಸ ಮನೆ ಕಟ್ಟಿದಾಗ ಅಲಂಕಾರಕ್ಕಾಗಿ ಗಾಂಧೀಜಿಯವರ ಭಾವಚಿತ್ರವನ್ನು ಬಿಟ್ಟು ಬೇರೆ ಯಾವ ಭಾವಚಿತ್ರವನ್ನು ಹಾಕಿಕೊಳ್ಳಲು ಒಪ್ಪಲಿಲ್ಲ. ಅದೇ ರೀತಿ ಅಮೆರಿಕೆಯ ಕಪ್ಪುಜನರ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಬರಾಕ್ ಒಬಾಮಾ ಮತ್ತು ಇಸ್ರೇಲ್ ದೇಶದ ಪ್ರಥಮ ಪ್ರಧಾನಿಗಳು ತಮ್ಮ ಕೊಠಡಿಯಲ್ಲಿ ಗಾಂಧೀಜಿಯವರ ಭಾವಚಿತ್ರವನ್ನು ಮಾತ್ರ ಹಾಕಿಕೊಂಡರು.

(ಸಂಗ್ರಹ : ನೇತಾಜಿ ಗಾಂಧಿ)







ಹಳೆಯ ಸರ್ಕಾರಿ ಶಾಲೆಗಳಿಗೆ ಸುಣ್ಣ ಬಣ್ಣ... ಸಮರ್ಪಣ ಸಂಸ್ಥೆಯ ಸ್ವಯಂ ಸೇವೆ

ಕಳೆದ ಒಂದೆರಡು ವರ್ಷಗಳಿಂದ 'ಸಮರ್ಪಣ' ಹೆಸರಿನ ಸ್ವಯಂ ಸೇವಾ ತಂಡವು ಹಳೆಯ ಸರ್ಕಾರೀ ಶಾಲೆಗಳಿಗೆ ಉಚಿತವಾಗಿ ಸುಣ್ಣ ಬಣ್ಣ ಮಾಡುವ ಕಾರ್ಯದಲ್ಲಿ ಸದ್ದಿಲ್ಲದೆ ನಿರತವಾಗಿದೆ. ಐದಾರು ವರ್ಷಗಳ ಹಿಂದೆ ಅರಸೀಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಭಾಗವಹಿಸಿದ್ದ ಕೆಲವು ವಿದ್ಯಾರ್ಥಿಗಳು ಸಮಾಜಕ್ಕೆ ನಾವು ಏನಾದರು ಒಳ್ಳೆಯ ಕೊಡುಗೆ ನೀಡಬೇಕು ಎಂದು ಸಂಕಲ್ಪ ತೊಡುತ್ತಾರೆ. ಇದರ ಫಲವೇ 'ಸಮರ್ಪಣ' ತಂಡದ ರಚನೆ.

ಆರಂಭದಲ್ಲಿ ಏಳೆಂಟು ಯುವಕರಿದ್ದ 'ಸಮರ್ಪಣ' ತಂಡ ಈಗ ಶಾಲೆಯ ಕಟ್ಟಡದ ವಿಸ್ತೀರ್ಣ ಮತ್ತು ಕಾರ್ಯ ಒತ್ತಡ ಆಧರಿಸಿ ಹದಿನೈದು ಇಪ್ಪತ್ತು ಮಂದಿ ತಂಡವಾಗಿ ಕಾರ್ಯ ನಿರ್ವಹಿಸುತ್ತದೆ. ಅರಕಲಗೂಡಿನ ಶತಮಾನ ತುಂಬಿದ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಜೂನ್ ತಿಂಗಳಿನಲ್ಲಿ ಒಂದು ವಾರ ಕಾಲ ಸುಣ್ಣ ಬಣ್ಣ ಮಾಡಿ ಜನರ ಗಮನ ಸೆಳೆದಿದ್ದಾರೆ. ಹಾಸನದ ಸ್ಥಳೀಯ ಬಿ ಎಡ್ ಕಾಲೇಜು ಮತ್ತು ಅರಕಲಗೂಡಿನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಕೊಂಡು ಈ ಶಾಲೆಗೆ ಆಕರ್ಷಕವಾಗಿ ಸುಣ್ಣ ಬಣ್ಣ ಮಾಡಿದ ಕಾರ್ಯ ಸ್ಥಳೀಯರಿಂದ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಪ್ರಶಂಸೆ ಪಡೆಯುವುದರ ಜೊತೆಗೆ ಮುಂದಿನ ದಿನಗಳಲ್ಲಿ ಸಮರ್ಪಣ ತಂಡದ ಜೊತೆ ಕೈಗೂಡಿಸಿ ಸೇವೆ ಮಾಡುವ ವಾತಾವರಣವನ್ನು ಮೂಡಿಸಿದೆ.



ಸಚಿನ್ ನೇತೃತ್ವದಲ್ಲಿ ರೂಪುಗೊಂಡಿರುವ 'ಸಮರ್ಪಣ' ತಂಡ ಅರಕಲಗೂಡು ಶಾಲೆಯ ಸುಣ್ಣ ಬಣ್ಣ ಮುಗಿಸಿ ಈಗ ಬೆಳಗಾವಿ ಸಮೀಪದ ಸಂಗೊಳ್ಳಿ ಗ್ರಾಮದ ಶಾಲೆಯಲ್ಲಿ ಹೊಸ ಸುಣ್ಣ ಬಣ್ಣ ಕಾರ್ಯಕ್ರಮವನ್ನು ಕೈಗೆತ್ತಿ ಕೊಂಡಿದೆ.

'ಸಮರ್ಪಣ' ತಂಡದ ಸ್ವಯಂ ಸೇವೆಯ ಸುದ್ದಿ ದೂರದ ದೆಹಲಿಯನ್ನು ಸಹಾ ತಲುಪಿದ್ದು ಮುಂದಿನ ತಿಂಗಳಲ್ಲಿ ದೆಹಲಿಯಲ್ಲಿರುವ ಗಾಂಧಿ ರಾಷ್ಟ್ರೀಯ ಮ್ಯೂಸಿಯಂ ಕಚೇರಿಯ ಆವರಣದಲ್ಲಿ ಗೋಡೆಗೆ ಸುಣ್ಣ ಬಣ್ಣ ಮತ್ತು ಕಲಾ ಕೃತಿಗಳಿಗೆ ಹೊಸ ರೂಪು ನೀಡುವ ಕಾರ್ಯಕ್ಕೆ ಕರೆ ಬಂದಿದೆ. ಸಮರ್ಪಣ ತಂಡಕ್ಕೆ ಅಭಿನಂದನೆಗಳು .









ಪೀಟರ್ ಮ್ಯಾರಿಟ್ಬರ್ಗ್ ರೈಲು ನಿಲ್ದಾಣದಲ್ಲಿ ಮಹಾತ್ಮ ಗಾಂಧಿ ಸ್ಮರಣೆ ..

ಪೀಟರ್ ಮ್ಯಾರಿಟ್ ಬರ್ಗ್ ರೈಲು ನಿಲ್ದಾಣದಲ್ಲಿ ಗಾಂಧಿಯವರನ್ನು ರೈಲಿನಿಂದ ಆಚೆಗೆ ತಳ್ಳಿದ ಘಟನೆಯ (ಜೂನ್ 7, 1893) 130 ವರ್ಷಗಳ ಸ್ಮರಣೆಯನ್ನು ಜೂನ್ 7,2023 ರಂದು ಅದೇ ರೈಲು ನಿಲ್ದಾಣದಲ್ಲಿ ಆಚರಿಸಲಾಯಿತು. ಈ ಸಮಾರಂಭದ ವರದಿ ಆಫ್ರಿಕಾದ ಇಂಗ್ಲಿಷ್ ಪತ್ರಿಕೆ' THE WITNESS'ನಲ್ಲಿ ಪ್ರಕಟವಾಗಿದ್ದು ಹೀಗೆ....



Boesak delivers rousing address at commemoration of Gandhi

Mohandas Gandhi's eviction from a whites-only railway carriage at the Pietermaritzburg Railway Station 130 years ago was a singular moment that changed the course of world history, said liberation theologist and United Democratic Front co-founder Reverend Allan Boesak, who was the guest speaker at Wednesday's annual commemoration.

Delivering a rousing address reminiscent of his anti-apartheid speeches during the 1970s and 1980s,



(From left: Kapil Kaushik, Allan Boesak, Puneet Kundal, Ela Gandhi, Banu Prakash, David Gengan and Mxolisi Mkhize.)

Boesak connected Gandhi's train eviction experience with other pivotal moments of history, explaining that these acts became “historically enormously consequential” because of the prevailing “revolutionary consciousness” of oppressed people who were ready for resistance.

The eviction of oppressed people, said Boesak, was something that happened repeatedly in history.

He cited what happened to Ida Wells in Tennessee, USA; to the women of the Free State who protested pass laws; to Claudette Colvin and 10 years later to Rosa Parks in Alabama, USA.

The personal indignity inflicted upon them, perhaps once or twice, perhaps because of their station in life, were indignities and humiliations inflicted a thousand-fold upon a whole people, in a thousand ways every single day … It is structural, systemic, psychological, physical violence brought home, made intensely personal.

Ladysmith residents want to grill Ramaphosa

“This is how one single act becomes a turning point in history,” said Boesak, reflecting on the actions that followed each incident. He described Gandhi's non-violent activism that followed his train eviction as having an “earthquake-like ramification” for the world.

Mahatma Gandhi, Nelson Mandela and Martin Luther King Jr. 2023 Conference

Guests and dignitaries from around the world gathered at the train station on Wednesday for the annual celebration hosted by the Pietermaritzburg Gandhi





Memorial Foundation (PGMF) and to place flowers at the plinth marking the spot Gandhi landed when he was thrown out of the train in 1893.

This year's commemoration is included in the programme of the Mahatma Gandhi, Nelson Mandela and Martin Luther King Jr. 2023 Conference currently taking place in the city.

Speaking at the event, India joint secretary for external affairs, ambassador Puneet Kundal said both bilateral and multilateral relations between the two countries had strengthened.

India this week deployed a 300-crew string navy warship to dock in Durban, in recognition of 30 years of bilateral relations.

The Indian navy band played at Wednesday's commemoration.

Pietermaritzburg Gandhi Memorial Foundation

PGMF chairperson said Mahatma Gandhi's strategy of shaming oppressive regimes through voluntary suffering had altered the course of history across two continents by bringing freedom to both South Africa and India.

Renowned musician Professor Chats Devroop, together with the Aradhana School of Dance, delivered moving artistic tributes.

This year's train station commemoration forms part of the conference, and is co-hosted by the University of KwaZulu-Natal and the PGMF.

Last night Msunduzi mayor Mzimkhulu Thebolla welcomed delegates and guests attending the conference at a gala dinner at the city hall.

Mayor Thebolla reflected on the legacy of Gandhi and Mandela in the city and their contribution to freedom and democracy in India and South Africa.

Professor Nhlanhla Mkhize, the deputy vice chancellor and head of College (Humanties) of the University of KwaZulu-Natal said the world found itself in the midst of immense conflict.

As I address you we are mindful of the war between Russia and Ukraine and mindful of the many silent wars in our families and in our streets. Addressing these challenges we must examine the views of these great leaders and their philosophies. Delegates at this conference represent a fountain wisdom that must help drive our approach to addressing these challenges and conflicts.

Delivering the keynote address at last night's gala dinner, Professor Clayborne Carson, an American academic, professor of history at Stanford University and director of the Martin Luther King, Jr. Research and Education Institute, called on delegates to emulate the actions of Gandhi, Mandela and King — rather than repeating their words.

"What was Martin Luther's last question, what is our call to action? Do we choose chaos or community? The challenge of the 21st century is simply what are we doing to protect the 'world house'?

"I urge you to find one person who believes in human rights and make a promise to them that you will continue to work with them and, eventually, build a global network — that's what movements are about.

Young people are encouraged to remember what Gandhi, King and Mandela were doing at your age. And this is what you should be doing. In a strong movement, young people don't wait — they act. ■

ಚಿ|ತ್ರಾ|ವ|ಳಿ



ದಕ್ಷಿಣ ಆಫ್ರಿಕಾದ ಡರ್ಬಾನ್ ನಗರದಲ್ಲಿ ಗಾಂಧೀಜಿ ಸ್ಥಾಪಿಸಿದ್ದ ಫೀನಿಕ್ಸ್ ಆಶ್ರಮವನ್ನು ಈಗಲೂ ಅರ್ಥಪೂರ್ಣವಾಗಿ ನಡೆಸಿಕೊಂಡು ಹೋಗುತ್ತಿರುವ ಮಹಾತ್ಮ ಗಾಂಧೀಜಿಯವರ ಮೊಮ್ಮಗಳು ಇಳಾ ಗಾಂಧಿ ಮತ್ತು ಅವರ ಮಗ ಕಿದಾರ್ ಗಾಂಧಿ ..



ತುಮಕೂರುಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಯುಕ್ತ ಆಶ್ರಯದಲ್ಲಿ ಗಾಂಧಿವಾದಿ ಹಾಗೂ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಜನ್ಮ ದಿನ ಸ್ಮರಣೆ ಕಾರ್ಯಕ್ರಮ . ಕೆನೆಡಾ ನಿವಾಸಿ ಗೊರೂರು ಪುತ್ರಿ ವಸಂತ ಮೂರ್ತಿ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು .



ಹುಣಸೂರು ಸಮೀಪದ ಯಶೋದರಪುರ ಗ್ರಾಮದಲ್ಲಿ ವಿದ್ಯಾವರ್ಧಕ ಕಾನೂನು ಕಾಲೇಜು, ವಿದ್ಯಾವಿಕಾಸ ಕಾಲೇಜು, ಶೇಷಾದ್ರಿಪುರ ಕಾಲೇಜು ಮತ್ತು ಗಾಂಧಿ ಸ್ಮಾರಕ ನಿಧಿ ಹಾಗೂ ಎಚ್ ಸಿ ದಾಸಪ್ಪ ವಿಚಾರ ವೇದಿಕೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವನ್ನು ಹೈಕೋರ್ಟ್ ನ್ಯಾಯಮೂರ್ತಿ ಶ್ರೀಮತಿ ಕೆ ಎಸ್ ಮುದಗಲ್ ಅವರು ಉದ್ಘಾಟಿಸಿದರು. ಜಿಲ್ಲಾ ನ್ಯಾಯಾಧೀಶ ಸಂಗ್ರೇಶಿ ಮಾಜಿ ಶಾಸಕ ವಾಸು, ಸರೋಜಮ್ಮ ತುಳಸೀದಾಸ್, ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷ ಜಿ ಬಿ ಶಿವರಾಜು ಸಮಾರಂಭದಲ್ಲಿದ್ದರು .



ತಿರುವನಂತಪುರದಲ್ಲಿ ಜೂನ್ 24 ,25 ರಂದು ನಡೆದ ದಕ್ಷಿಣ ಪ್ರಾಂತ್ಯ ರಾಜ್ಯಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದ ಸದಸ್ಯರುಗಳು



ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ ನಲ್ಲಿರುವ ಗಾಂಧಿ ವೃತ್ತದಲ್ಲಿ ಭಾರತೀಯ ನಿಯೋಗದ ಸದಸ್ಯರು




ಬೆಂಗಳೂರು ನಗರ ವಿಶ್ವ ವಿದ್ಯಾಲಯದಿಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ
ವೂಡೇ ಪಿ ಕೃಷ್ಣ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : **Printastic,** 272, 2nd Main Road, 6th Cross, Lavakushanagar, Laggere Bangalore-58